
# ಶ್ರೀಮಾತೆಯವರ
# ಎಂಟು ದರ್ಶನಗಳು



ಅಖಿಲ ಭಾರತ ಪತ್ರಿಕೆ

ಜುಲೈ 2014



*It is only when we are not disturbed*
*that we can always do the right thing*
*at the right time and in the right way.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

### "ಶ್ರೀಮಾತೆಯವರ ಎಂಟು ದರ್ಶನಗಳು"


**ಅನು : ಡಾ. ಕೆ.ಎಸ್. ಆಮೂರ**

ಶ್ರೀಮಾತೆಯವರ ಎಂಟು ದರ್ಶನಗಳು (ಪೀಠಿಕೆ) 3
ಬಹಳ ಪ್ರಾಚೀನ ಕಾಲದ ಸಂಪ್ರದಾಯ 4
ದರ್ಶನ – 1 6
ದರ್ಶನ – 2 11
ದರ್ಶನ – 3 15
ದರ್ಶನ – 4 18
ದರ್ಶನ – 5 23
ದರ್ಶನ – 6 28

**ಅನು : ಶ್ರೀ ಪುರುಷೋತ್ತಮ ಗಲಗಲಿ**

ದರ್ಶನ – 7 33

**ಅನು : ಶ್ರೀ ವೀರೇಂದ್ರ ಸಿಂಪಿ**

ದರ್ಶನ – 8 35

**ವಾರ್ತಾಪತ್ರ** 40


**ಮುಖಪುಟದ ಮೇಲೆ ತೋರಿಸಿದ ಪುಷ್ಪದ ಪ್ರಾಮುಖ್ಯತೆ:**
**"ಶುದ್ಧ ಆಧ್ಯಾತ್ಮಿಕ ಶರಣಾಗತಿ"**

# "ಶ್ರೀಮಾತೆಯವರ ಎಂಟು ದರ್ಶನಗಳು"

## ಶ್ರೀಮಾತೆಯವರ ಎಂಟು ದರ್ಶನಗಳು (ಪೀಠಿಕೆ)

ಮೇ 28, 1958 ರಂದು ಶ್ರೀಮಾತೆಯವರು ತಮಗೆ ಆಗಿದ್ದ ಒಂದು ದರ್ಶನವನ್ನು ನಿರೂಪಿಸಿದರು, ಆ ದರ್ಶನದಲ್ಲಿ ಪರಮೋಚ್ಚ ದೈವೀ ಮೂಲದಿಂದ ಉದ್ಭವವಾದ ದೈವೀ ಪ್ರಜ್ಞೆ ಹಾಗೂ ದೈವೀ ಪ್ರೇಮಗಳುಳ್ಳ ಅದ್ಭುತ ದೈವೀ ಸತ್ತೆ ನೇರವಾಗಿ ಅಚೇತನದಲ್ಲಿ ಪ್ರಕ್ಷೇಪಿಸಿಕೊಂಡದ್ದನ್ನು ಕಂಡರು, ಅದರಿಂದಾಗಿ ಸೃಷ್ಟಿ ಕ್ರಮೇಣ ಅತಿಮಾನಸ ಪ್ರಜ್ಞೆಗೆ ಎಚ್ಚತ್ತುಕೊಳ್ಳುವಂತಾಯಿತು. ಮೇ 28, 1958ರಂದು ಶ್ರೀಮಾತೆಯವರು ನಿರೂಪಿಸಿದ್ದನ್ನು ಈ ಸಂಚಿಕೆಯ ಪುಟಗಳಲ್ಲಿ ಮೊದಲನೆಯ ಲೇಖನವೆಂದು ಪ್ರಕಟಿಸಲಾಗಿದೆ.

ಪ್ಯಾರಿಸ್‌ನಲ್ಲಿ ಪ್ರಕಟವಾಗುತ್ತಿದ್ದ ಮಾಸಿಕ ಪತ್ರಿಕೆ (Revue Cosmique) ಯಲ್ಲಿ ಈ ದರ್ಶನದ ವಿಷಯವನ್ನು ನವ್ವೆಂಬರ 1906ರಲ್ಲಿ ಮೊದಲು ಹೊರತರಲಾಗಿತ್ತು. 1906–07ರ ಸಮಯದಲ್ಲಿ ಶ್ರೀಮಾತೆಯವರು ಇನ್ನೂ ಆರು ದರ್ಶನಗಳನ್ನು ಕಂಡಿದ್ದರು. ಇವುಗಳನ್ನು ದಾಖಲಿಸಿದ್ದರಲ್ಲಿ ಶ್ರೀಮಾತೆಯವರ ರುಜು ಇರಲಿಲ್ಲವಾದರೂ ಅವುಗಳನ್ನು ಅದೇ ಬಗೆಯ ಶಬ್ದಗಳಿಂದ ಪ್ರಾರಂಭಿಸಲಾಗಿತ್ತು. ಅದೇ ಶೈಲಿಯಲ್ಲಿ ಬರೆಯಲಾಗಿತ್ತು, ಅದೇ ಬಗೆಯ ಅನುಭವದ ಎಳೆಗಳ ಆಧಾರ ಹೊಂದಿದ್ದವು, ಇದೆಲ್ಲ ಆ ಲೇಖನಗಳನ್ನು ಶ್ರೀಮಾತೆಯವರೇ ಬರೆದಿದ್ದ–ರೆಂಬುದನ್ನು ಬಹುಮಟ್ಟಿಗೆ ಖಚಿತಪಡಿಸುತ್ತದೆ.

ಇತ್ತೀಚೆಗೆ ಎಂದರೆ 1980ರಲ್ಲಿ ದೊರೆತ ಸಾಕ್ಷ್ಯದಿಂದ ಈ ತೀರ್ಮಾನ ದೃಢೀಕರಣಗೊಳ್ಳುತ್ತದೆ. ಅಲ್ಲಿ ಶ್ರೀಮಾತೆಯವರ ಕೈಬರಹದಲ್ಲಿಯೇ ಇರುವ ಎಂಟನೆಯ ದರ್ಶನದ ಹಸ್ತಪ್ರತಿ ಮೊದಲು ಕಂಡುಬರುತ್ತದೆ, ಅದರ ಶೀರ್ಷಿಕೆ "Une Vision 8" ಎಂದಿದೆ. ಅಲ್ಲದೆ ಎಂಟನೆಯ ದರ್ಶನ ಹಾಗೂ ಐದನೆಯ ದರ್ಶನದ ಒಂದು ಭಾಗ ಇರುವ, ಅಲ್ಪ ಸ್ವಲ್ಪ ವ್ಯತ್ಯಾಸ ಮಾಡಿ ಬರೆದ ಹಸ್ತಪ್ರತಿಗಳೂ ದೊರೆತಿವೆ.

ಈ ಸಂಚಿಕೆಯಲ್ಲಿ ಎಂಟೂ ದರ್ಶನಗಳನ್ನು ಪ್ರಕಟಿಸಲಾಗಿದೆ.

ತಮ್ಮ ದರ್ಶನಗಳನ್ನು ನಿರೂಪಿಸುವಾಗ ಶ್ರೀಮಾತೆಯವರು Revue ಪತ್ರಿಕೆಯಲ್ಲಿ ವಿವರವಾಗಿ ವರ್ಣಿಸಲಾದ "Cosmic Philosophy" ಲೇಖನದಿಂದ ಕೆಲವು ಶಬ್ದಗಳನ್ನು ಉಪಯೋಗಿಸಿದ್ದಾರೆ. ಅವುಗಳನ್ನು ಅನುವಾದದಲ್ಲಿ



ಸುಮಾರಾಗಿ ಅಳವಡಿಸಿಕೊಳ್ಳಲಾಗಿದೆ, ಅದರಿಂದಾಗಿ ಸಾಹಿತ್ಯಕ ಗುಣಮಟ್ಟವನ್ನು ಕಾಪಾಡಿಕೊಂಡು ಬರುವಂತಾಗಿದೆ. ಈ ಶಬ್ದಗಳನ್ನು ಅಡಿಟಿಪ್ಪಣೆಗಳ ಮೂಲಕ ಗುರುತಿಸಲಾಗಿದೆ.

*

## ಬಹಳ ಪ್ರಾಚೀನ ಕಾಲದ ಸಂಪ್ರದಾಯ

ಶ್ರೀಮಾತೆಯವರು ಮೇ 28, 1958ರಂದು ಹೇಳಿದ್ದು.

ಬಹಳ ಪ್ರಾಚೀನ ಕಾಲದ ಸಂಪ್ರದಾಯವೊಂದನ್ನು ಕುರಿತು ನಾನು ನಿಮ್ಮ ಬಳಿ ಮಾತನಾಡಬಹುದು. ಅದು ಪರಿಚಿತವಾದ ಎರಡು ಆಧ್ಯಾತ್ಮಿಕ ಹಾಗೂ ರಹಸ್ಯ ವಿದ್ಯೆಯ ಸಂಪ್ರದಾಯಗಳಿಗಿಂತ ಎಂದರೆ ವೈದಿಕ ಮತ್ತು ಚಾಲ್ಡಿಯನ್ ಸಂಪ್ರದಾಯಗಳ ಧಾರೆಗಳಿಗಿಂತ ಹೆಚ್ಚು ಪ್ರಾಚೀನವಾದದ್ದು. ಈ ಪ್ರಾಚೀನ ಸಂಪ್ರದಾಯ ಇವೆರಡು ಸಂಪ್ರದಾಯಗಳ ಮೂಲದಲ್ಲಿದ್ದ ಹಾಗೆ ತೋರಿಬರುತ್ತದೆ. ಇವೆರಡರ ಪ್ರಕಾರ ವಿರೋಧೀ ಶಕ್ತಿಗಳ ಕ್ರಿಯೆಯಿಂದಾಗಿ – ಹಿಂದೂ ಸಂಪ್ರದಾಯದಲ್ಲಿ ಈ ವಿರೋಧೀ ಶಕ್ತಿಗಳನ್ನು ಅಸುರರೆಂದು ಕರೆಯುತ್ತಾರೆ – ಜಗತ್ತು ದೈವೀ ಪ್ರಕಾಶ ಮತ್ತು ಅಂತರ್ನಿಹಿತ ಪ್ರಜ್ಞೆ ಇವುಗಳಿಗೆ ಅನುಸಾರವಾಗಿ ಅಭಿವೃದ್ಧಿ ಹೊಂದದೆ, ನಮಗೆ ತಿಳಿದ ಹಾಗೆ ಅಂಧಕಾರ, ಅಚೇತನ ಹಾಗೂ ಅಜ್ಞಾನಗಳಲ್ಲಿ ಬಿದ್ದುಬಿಟ್ಟಿತು. ಸೃಷ್ಟ್ಯಾತ್ಮಕ ದೈವೀ ಸಾಮರ್ಥ್ಯ ಪರಮೋಚ್ಚ ದೈವೀ ಮೂಲಕ್ಕೆ ಮೊರೆಯಿಟ್ಟಿತು, ವಿಶೇಷವಾದ ಮಧ್ಯಸ್ಥಿಕೆ ವಹಿಸಲು ಕೇಳಿಕೊಂಡಿತು. ಆ ಮಧ್ಯಸ್ಥಿಕೆ ಭ್ರಷ್ಟವಾದ ವಿಶ್ವವನ್ನು ರಕ್ಷಿಸಬೇಕಾಗಿತ್ತು. ಈ ಪ್ರಾರ್ಥನೆಗೆ ಉತ್ತರ ಕೊಡುವ ರೂಪದಲ್ಲಿ ಪರಮೋಚ್ಚ ದೈವೀ ಮೂಲದಿಂದ ದೈವೀ ಪ್ರೇಮ ಮತ್ತು ದೈವೀ ಪ್ರಜ್ಞೆಗಳಿರುವ ಒಂದು ವಿಶೇಷ ಅಸ್ತಿತ್ವ ಉದ್ಭವಿಸಿತು. ಈ ರೂಪದ ದೇವ ತನ್ನನ್ನು ನೇರವಾಗಿ ಅತ್ಯಂತ ಅಚೇತನದ್ದಾದ ಭೌತದ್ರವ್ಯದಲ್ಲಿ ತನ್ನನ್ನು ಎಸೆದು ಬಿಟ್ಟನು, ಅಲ್ಲಿ ಅವನು ಅದನ್ನು ಮೂಲ ದೈವೀ ಪ್ರೇಮ ಹಾಗೂ ದೈವೀ ಪ್ರಜ್ಞೆಗಳಿಗೆ ಎಚ್ಚರಗೊಳಿಸುವ ಕಾರ್ಯ ಮಾಡಬೇಕಾಗಿತ್ತು.

ಪ್ರಾಚೀನ ಕಥಾನಕಗಳಲ್ಲಿ ಈ ದೈವೀ ಸತ್ತೆ ಹೆಚ್ಚಿನ ಅಂಧಕಾರವಿರುವ ಗುಹೆಯೊಂದರಲ್ಲಿ ತನ್ನನ್ನು ಚಾಚಿಕೊಂಡು ಗಾಢವಾದ ನಿದ್ರೆಯಲ್ಲಿ ಮಲಗಿ–ಕೊಂಡಿರುವಂತೆ ವರ್ಣಿಸಲಾಗಿದೆ. ಅವನ ನಿದ್ರೆಯಲ್ಲಿ ವರ್ಣವಿನ್ಯಾಸ (prismatic)

ಹೊಂದಿರುವ ಪ್ರಕಾಶದ ಕಿರಣಗಳು ಉದ್ಭವಿಸಿದವು ಮತ್ತು ಕ್ರಮೇಣ ಅಚೇತನದಲ್ಲಿ ಹರಡಿಕೊಂಡವು. ಹಾಗೂ ಅಚೇತನದ ಎಲ್ಲ ಅಂಶಗಳಲ್ಲಿ ತಮ್ಮನ್ನು ಬೇರೂರಿ–ಸಿದವು, ಅದರಿಂದಾಗಿ ಎಚ್ಚರಿಸುವ ಕಾರ್ಯ ಪ್ರಾರಂಭವಾಗುವಂತಾಯಿತು.

ಮನುಷ್ಯ ಪ್ರಜ್ಞಾಪೂರ್ವಕವಾಗಿ ಈ ಅಚೇತನದಲ್ಲಿ ಪ್ರವೇಶಿಸಿದರೆ ಅಲ್ಲಿ ಇನ್ನೂ ಇದೇ ಈ ಅದ್ಭುತ ದೈವೀ ಸತ್ತೆ ಇನ್ನೂ ಆಳವಾದ ನಿದ್ರೆಯಲ್ಲಿ ಇರುವುದನ್ನು, ತನ್ನಿಂದ ಉದ್ಭವಿಸಬೇಕಾದ ಕಾರ್ಯ ಮಾಡುತ್ತ ತನ್ನ ದೈವೀ ಪ್ರಕಾಶವನ್ನು ಹರಡುತ್ತ ಇರುವುದನ್ನು ನೋಡಬಹುದು. ಮತ್ತು ಅಚೇತನವಾದದ್ದು ಅಚೇತನದ್ದಾಗಿರದೆ ಇರುವವರೆಗೆ, ಅಂಧಕಾರ ಜಗತ್ತಿನಿಂದ ಮಾಯವಾಗುವವರೆಗೆ – ಹಾಗೂ ಇಡೀ ಸೃಷ್ಟಿ ಅತಿಮಾನಸ ಪ್ರಜ್ಞೆಗೆ ಎಚ್ಚತ್ತುಕೊಳ್ಳುವವರೆಗೆ ಅವನು ಆ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಾನೆ.

ಅಸಾಧಾರಣವಾದ ವಿಷಯವೆಂದರೆ ಈ ಅದ್ಭುತ ದೈವೀ ಸತ್ತೆ, ವಿಚಿತ್ರ ರೀತಿಯಲ್ಲಿ ನಾನು ಒಂದು ದಿನ ದರ್ಶನದಲ್ಲಿ, ರೂಪವಿದ್ದ ಹಾಗೂ ರೂಪರಹಿತ ಎಂಬ ಎರಡು ಬಗೆಯ ಭಾವನೆ ಬರುವ ಎಲ್ಲೆಯಲ್ಲಿ ಕಂಡಿದ್ದ ಇನ್ನೊಂದು ತುದಿಯಲ್ಲಿದ್ದ ದೈವೀ ಸತ್ತೆಯನ್ನು ಹೋಲುತ್ತಿತ್ತು, ಆದರೆ ಆ ಇನ್ನೊಂದು ಬಂಗಾರ ವರ್ಣದ ಕಡುಗೆಂಪಿನ ವೈಭವದಲ್ಲಿತ್ತು, ಅದು ಹಾಗಿರುವಾಗ ನಿದ್ರೆಯಲ್ಲಿದ್ದ ದೈವೀ ಸತ್ತೆ ವಜ್ರದ ಹೊಳಪಿನ ಶ್ವೇತವರ್ಣದ್ದಾಗಿತ್ತು ಮತ್ತು ಕ್ಷೀರ ಸ್ಫಟಿಕದಂತೆ ಉಜ್ವಲ ಕಿರಣಗಳನ್ನು ಪ್ರತಿಫಲಿಸುತ್ತಿತ್ತು.

ವಾಸ್ತವದಲ್ಲಿ ಇದೇ ಎಲ್ಲ ಅವತಾರಗಳ ಮೂಲ. ಅವನು ಮೊದಲ ವಿಶ್ವಂಭರ ಅವತಾರ ಎಂದು ಹೇಳಬಹುದು. ಅವನು ಕ್ರಮೇಣ ಹೆಚ್ಚು ಪ್ರಜ್ಞೆಯುಳ್ಳ ದೇಹಗಳನ್ನು ಧಾರಣೆ ಮಾಡಿದನು ಮತ್ತು ಕೊನೆಗೆ ಗುರುತಿಸಲಾದ ದೈವೀ ಸತ್ತೆಗಳ ಒಂದು ಬಗೆಯ ಧಾರೆಯಲ್ಲಿ ಪ್ರಕಟನಾಗಿದ್ದಾನೆ. ಈ ದೈವೀ ಸತ್ತೆಗಳು ವಿಶ್ವವನ್ನು ತಯಾರು ಮಾಡುವ ಈ ಕಾರ್ಯವನ್ನು ಪರಿಪೂರ್ಣಗೊಳಿಸುವು–ದಕ್ಕಾಗಿ, ನೇರವಾಗಿ, ಪರಮೋಚ್ಚನಿಂದ ಅವರೋಹಣ ಮಾಡಿವೆ. ಅದರಿಂದಾಗಿ ಸತತವಾಗಿರುವ ಮುನ್ನಡೆಯ ಮೂಲಕ ಅದು ಅತಿಮಾನಸ ಪ್ರಕಾಶವನ್ನು, ಅದರ ಸಮಗ್ರತೆಯಲ್ಲಿ, ಸ್ವೀಕರಿಸಲು ತಯಾರಾಗುವುದು ಸಾಧ್ಯವಾಗಬಹುದು.

ಪ್ರತಿಯೊಂದು ದೇಶದಲ್ಲಿ, ಪ್ರತಿಯೊಂದು ಸಂಪ್ರದಾಯದಲ್ಲಿ ಈ ಘಟನೆಯನ್ನು ಕುರಿತು ವಿಶಿಷ್ಟ ರೀತಿಯಲ್ಲಿ ಹೇಳಲಾಗಿದೆ, ಅದರಲ್ಲಿ ಭಿನ್ನ ಮಿತಿಗಳಿವೆ, ಭಿನ್ನ ವಿವರಗಳಿವೆ, ವಿಶಿಷ್ಟ ಲಕ್ಷಣಗಳಿವೆ, ನಿಜ ಹೇಳುವುದಾದರೆ ಈ ಎಲ್ಲ ಕತೆಗಳ ಮೂಲ ಒಂದೇ ಆಗಿದೆ. ಅದನ್ನು ನಾನು ಅತ್ಯಂತ ಅಂಧಕಾರವಿದ್ದ ಭೌತದ್ರವ್ಯದಲ್ಲಿ ಪರಮೋಚ್ಚನ ನೇರ, ಪ್ರಜ್ಞಾಪೂರ್ಣ ಮಧ್ಯಸ್ಥಿಕೆ ಎಂದು ಕರೆಯಬಹುದು, ದೈವೀ ಶಕ್ತಿಗಳನ್ನು ಸ್ವೀಕರಿಸುವುದಕ್ಕಾಗಿ ಈ ಭೌತದ್ರವ್ಯವನ್ನು ಜಾಗ್ರತಗೊಳಿಸುವುದಕ್ಕಾಗಿ ಮಧ್ಯವರ್ತಿಗಳ ಮೂಲಕ ಸಾಗಿ ಹೋಗದೆ ಪರಮೋಚ್ಚನು ನೇರವಾಗಿ ಕೈಕೊಂಡ ಕಾರ್ಯ ಇದಾಗಿದೆ.



ಈ ಅನೇಕ ಅವತಾರಗಳ ನಡುವಿನ ಮಧ್ಯಂತರಗಳು ಚಿಕ್ಕವಾಗುತ್ತ ಹೋಗುತ್ತವೆ, ಅದೆಷ್ಟರ ಮಟ್ಟಿಗೆಂದರೆ ಭೌತದ್ರವ್ಯ ಹೆಚ್ಚು ತಯಾರಾಗುತ್ತದೆ, ಕ್ರಿಯೆ ವೇಗೋತ್ಕರ್ಷ ಪಡೆದು ಹೆಚ್ಚು ತೀವ್ರಗತಿಯದಾಗುತ್ತದೆ, ಹೆಚ್ಚು ಪ್ರಜ್ಞಾಪೂರ್ಣ–ವಾದದ್ದೂ ಕೂಡ ಆಗುತ್ತದೆ, ಹೆಚ್ಚು ಪರಿಣಾಮಕಾರಿ ಹಾಗೂ ನಿರ್ಧಾರಕವಾಗುತ್ತದೆ.

ಮತ್ತು ಇಡೀ ವಿಶ್ವ ಪರಮೋಚ್ಚನ ಇಡೀ ಅವತಾರವಾಗುವವರೆಗೆ ಅದು ವೃದ್ಧಿಸುತ್ತ, ಗಾಢವಾಗುತ್ತ ಹೋಗುತ್ತದೆ.

**(CWM 9/332–34)** – **ಶ್ರೀಮಾತೆ**

*

## ದರ್ಶನ – 1

ನಾನು ಮಲಗಿದ್ದೆ ಮತ್ತು ಈಗ ಎಚ್ಚತ್ತಿದ್ದೇನೆ.

ನಾನು ಪಶ್ಚಿಮದ ಜಲಗಳ ಮೇಲೆ ಮಲಗಿದ್ದೆ, ಈಗ ನಾನು ಸಮುದ್ರವನ್ನು ಪ್ರವೇಶಿಸುವೆ, ಅದರ ಆಳಗಳನ್ನು ಪರಿಶೋಧಿಸಬೇಕಾಗಿದೆ. ಅದರ ಮೇಲ್ಮೈ ಎಳೆ ಹಸಿರು (beryl) ಬಣ್ಣದ್ದು, ಬೆಳದಿಂಗಳಲ್ಲಿ ಬೆಳ್ಳಿ ಬಣ್ಣದ ಛಾಯೆಯನ್ನು ಹೊಂದಿರುತ್ತದೆ. ಕೆಳಗೆ ಜಲ ಆಕಾಶ ನೀಲಿ ಬಣ್ಣದ್ದಾಗಿದೆ ಮತ್ತು ಕೂಡಲೆ ಮಬ್ಬಾಗಿ ಪ್ರಕಾಶಮಯವಾಗುತ್ತದೆ.

ಇಸ್ತ್ರಿ ಮಾಡಿದಾಗ ಕಾಣುವ ಹೊಳಪಿರುವ, ಕಿರುದೆರೆಗಳ ಹಾಗೆ ಮಿನುಗುತ್ತಿದ್ದ ತರಂಗ ರಚನೆಗಳ ಮೇಲೆ ನಾನು ಒರಗಿಕೊಂಡಿದ್ದೆ ಮತ್ತು ಈಗ ಮೃದುವಾದ ಕ್ರಮಬದ್ಧ ಚಲನೆಯ ಮೂಲಕ ಒಂದು ತರಂಗ ರಚನೆಯಿಂದ ಇನ್ನೊಂದರತ್ತ ತೂಗುತ್ತ ನೇರವಾಗಿ ನಾನು ಕೆಳಗಿಳಿಯುತ್ತಿದ್ದೇನೆ, ನನ್ನನ್ನು ನೇರವಾಗಿ ಪಶ್ಚಿಮ

ದಿಕ್ಕಿನತ್ತ ಹೊತ್ತೊಯ್ಯಲಾಗುತ್ತಿದೆ. ನಾನು ಮಂದಗತಿಯಿಂದ ಆಳದಲ್ಲಿ ಮುಂದುವರಿದು ಹೋಗುತ್ತಿದ್ದ ಹಾಗೆ ನೀರು ಹೆಚ್ಚು ಪ್ರಕಾಶಮಾನವಾಗುತ್ತದೆ ಮತ್ತು ಬೆಳ್ಳಿ ಬಣ್ಣದ ತರಂಗಗಳೊಡನೆ ಒಳಎಳೆತಕ್ಕೊಳಗಾಗುತ್ತದೆ.

ಹೀಗೆ ನಾನು ಒಂದು ತರಂಗ ರಚನೆಯಿಂದ ಇನ್ನೊಂದರತ್ತ ತೂಗುತ್ತ, ಕೆಳಗೆ, ಇನ್ನೂ ಹೆಚ್ಚು ಕೆಳಗಿಳಿದು ಹೋಗುತ್ತೇನೆ.

ಒಮ್ಮೆಗೆ ಮೇಲ್ಗಡೆ ನೊಡಿದಾಗ ಅಲ್ಲಿ ಗುಲಾಬಿ ಕೆಂಪಿನ ಮಿನುಗು ನನ್ನ ಗಮನ ಸೆಳೆಯುತ್ತದೆ, ನಾನು ಇನ್ನೂ ಹತ್ತಿರ ಹೋಗುತ್ತೇನೆ, ಅಲ್ಲಿ ಕೆಂಪು ಹವಳದಂತಿರುವ ಪೊದೆ ಕಾಣಿಸುತ್ತದೆ, ಅದು ಒಂದು ಗಿಡದಷ್ಟು ದೊಡ್ಡದಾಗಿದೆ ನೀಲಿ ಬಣ್ಣದ ಬಂಡೆಯೊಂದಕ್ಕೆ ಅಂಟಿಕೊಂಡಿದೆ. ಅನೇಕಾನೇಕ ವಿಧದಲ್ಲಿರುವ ಜಲಚರ ಜೀವಿಗಳು ಬರುತ್ತವೆ, ಹೋಗುತ್ತವೆ. ಈಗ ನಾನು ಚೆನ್ನಾಗಿ ಕಾಣುವ, ಹೊಳೆಯುತ್ತಿರುವ ಉಸುಕಿನ ಮೇಲೆ ನಿಂತುಕೊಂಡಿದ್ದೇನೆ. ಸುತ್ತಲೂ ಆಶ್ಚರ್ಯದಿಂದ ನೊಡುತ್ತೇನೆ. ಅಲ್ಲಿ ಪರ್ವತಗಳಿವೆ, ಕಣಿವೆಗಳಿವೆ, ಕಲ್ಪನಾತಿ–ರೇಕದ್ದೆನಿಸುವ ಅರಣ್ಯಗಳಿವೆ, ವಿಚಿತ್ರ ಪುಷ್ಪಗಳಿವೆ, ಅವು ಬಹುಮಟ್ಟಿಗೆ ಪಶುಗಳ ಹಾಗೆ ಕಾಣಿಸುತ್ತವೆ, ಮೀನುಗಳನ್ನು ಹೂಗಳೆಂದು ಭಾವಿಸುವಂತಿದೆ. – ಅಲ್ಲಿ ಪ್ರತ್ಯೇಕತೆಯಿಲ್ಲ, ಸ್ಥಿರ ಹಾಗೂ ಚಲಿಸುವ ಸತ್ತೆಗಳ ನಡುವೆ ಅಂತರವಿಲ್ಲ. ಎಲ್ಲೆಡೆಯಲ್ಲಿ ಮೆದುವಾದ ಇಲ್ಲವೆ ಎದ್ದುಕಾಣುವ ಮತ್ತು ವರ್ಣ ವೈವಿಧ್ಯವಿರುವ ಬಣ್ಣಗಳಿವೆ, ಆದಾಗ್ಯೂ ಅವು ಒಂದು ಇನ್ನೊಂದರೊಂದಿಗೆ ಯಾವಾಗಲೂ ಶುದ್ಧಗೊಂಡ, ಸಾಮರಸ್ಯದಲ್ಲಿರುವ ಬಣ್ಣಗಳಾಗಿರುತ್ತವೆ. ನಾನು ಬಂಗಾರ ವರ್ಣದ ಉಸುಕಿನ ಮೇಲೆ ಅಡ್ಡಾಡುತ್ತೇನೆ, ಈ ಎಲ್ಲ ಸೌಂದರ್ಯದತ್ತ ದಿಟ್ಟಿಸಿ ನೋಡುತ್ತೇನೆ, ಅಲ್ಲಿರುವ ಸೌಂದರ್ಯ ಮಸುಕಾದ ನೀಲಿ ವರ್ಣದ ತೇಜಸ್ಸಿರುವ, ಸುತ್ತುಹೊಡೆಯುವ ಕೆಂಪು ಇಲ್ಲವೆ ಹಸಿರು ಇಲ್ಲವೆ ಬಂಗಾರ ವರ್ಣದ ಗೋಲಗಳ ಚುಕ್ಕೆಗಳಿಂದ ಉಂಟಾಗಿತ್ತು.

ಎಲ್ಲ ಸಾಮರಸ್ಯಗಳು ನೆಲೆಗೊಂಡಿರುವ ಏಕೈಕನಾದವನ ಸಾನ್ನಿಧ್ಯವನ್ನು ಎಲ್ಲೆಡೆಯಲ್ಲಿ ಭಾವನೆಗೆ ತಂದುಕೊಳ್ಳಬಹುದಾಗಿತ್ತು.

ದಣಿವಾಗಿರುವ ಭಾವನೆ ತಂದುಕೊಳ್ಳದೆ ಇಲ್ಲವೆ ವೇಗವನ್ನು ಕಡಿಮೆ ಮಾಡದೆ ಪಶ್ಚಿಮ ದಿಕ್ಕಿನತ್ತ ಪ್ರಯಾಣವನ್ನು ಮುಂದುವರಿಸುತ್ತೇನೆ. ನಂಬಲಸಾಧ್ಯವಾದ ವೈವಿಧ್ಯದೊಂದಿಗೆ ದೃಶ್ಯದ ನಂತರ ದೃಶ್ಯ ಅನುಸರಿಸಿ ಬರುತ್ತಿದೆ. ಅಲ್ಲಿ



ವೈಢೂರ್ಯ ನೀಲಿ ಬಣ್ಣದ ಕಲ್ಲುಬಂಡೆಯ ಮೇಲೆ ಚೆನ್ನಾಗಿ ಕಾಣುವ, ಸೂಕ್ಷ್ಮ ಸಮುದ್ರದ ಕದಿರು–ಕಡ್ಡಿಗಳಿವೆ, ಅವು ನೇರಿಳೆ ಬಣ್ಣದ ಇಲ್ಲವೆ ಹೊಂಬಣ್ಣದ ಕೂದಲುಗಳ ಹಾಗೆ ಕಾಣಿಸುತ್ತವೆ. ಇಲ್ಲಿ ಗುಲಾಬಿ ಬಣ್ಣವಿರುವ ಗೋಡೆಗಳಿವೆ, ಅವೆಲ್ಲವನ್ನೂ ಬೆಳ್ಳಿಯಿಂದ ಅಂದಗೊಳಿಸಲಾಗಿದೆ, ಭವ್ಯ ಗಾತ್ರವಿರುವ ವಜ್ರಗಳಿಂದ ಕೊರೆದು ತೆಗೆದಂತಹ ಪುಷ್ಪಗಳಿವೆ, ಇಲ್ಲಿ ಕುಶಲಕರ್ಮಿಗಳಲ್ಲಿ ಅತ್ಯಂತ ಹೆಚ್ಚಿನ ಕೌಶಲವುಳ್ಳವನು ಆಕಾರಕೊಟ್ಟ ಪಾನಪಾತ್ರೆಗಳಿವೆ, ಅದರಲ್ಲಿ ಪಚ್ಚೆ ಬಣ್ಣ(emerald)ದ ಹನಿಗಳು ಲಯಬದ್ಧವಾಗಿ ಹಿಗ್ಗುವುದನ್ನು, ಕುಗ್ಗುವುದನ್ನು ಮಾಡುತ್ತವೆ, ಅವುಗಳೊಡನೆ ಪರ್ಯಾಯವಾಗಿ ಬರುವ ಛಾಯೆ ಮತ್ತು ಬೆಳಕುಗಳಿವೆ.

ನಾನೀಗ ಎರಡು ಗೋಡೆಗಳ ನಡುವಿರುವ ಬೆಳ್ಳಿ ಬಣ್ಣದ ಉಸುಕಿರುವ ಮಾರ್ಗದ ಮೇಲೆ ಪ್ರವೇಶಿಸಿದ್ದೇನೆ, ಆ ಗೋಡೆಗಳ ಕಲ್ಲುಗಳು ನೀಲಮಣಿಯ ನೀಲಿ ಬಣ್ಣದಿಂದ ಪ್ರಕಾಶಿಸುತ್ತವೆ. ನೀರು ಹೆಚ್ಚು ನಿರ್ಮಲ ಹಾಗೂ ಪ್ರಕಾಶಮಯ–ವಾಗುತ್ತದೆ.

ಮಾರ್ಗದಲ್ಲಿ ಒಮ್ಮೆಗೆ ಬಂದ ಒಂದು ತಿರುವಿನಲ್ಲಿ ನಾನು ಒಂದು ಗುಹೆಯ ಸಮ್ಮುಖದಲ್ಲಿ ಇರುವಂತೆ ಕಂಡುಬರುತ್ತದೆ. ಸ್ಫಟಿಕದಿಂದ ಆ ಗುಹೆಯನ್ನು ತಯಾರಿಸಿದ್ದಾರೋ ಎನ್ನುವಂತೆ ತೋರಿಬರುತ್ತದೆ, ಅದು ಕಾಮನಬಿಲ್ಲಿನ ಬಣ್ಣಗಳಿಂದ ಥಳಥಳಿಸುತ್ತದೆ.

ವರ್ಣವೈವಿಧ್ಯದಿಂದ ಕೂಡಿರುವ ಎರಡು ಕಂಬಗಳ ನಡುವೆ ಆಳೆತ್ತರದ ಸತ್ತೆಯೊಬ್ಬ ನಿಂತಿದ್ದಾನೆ. ಅವನ ಮುಖ ತರುಣನದಿದ್ದ ಹಾಗಿದೆ, ಅವನಿಗೆ ಚಿಕ್ಕ ಗಾತ್ರದ ಗುಂಗುರು ಕೂದಲುಗಳಿವೆ. ಅವನ ಕಣ್ಣುಗಳ ಬಣ್ಣ ಸಮುದ್ರದ ಬಣ್ಣದ ಹಾಗೆ ಹಸಿರು ಬಣ್ಣದ್ದಾಗಿದೆ. ಅವನು ಮಂಡಿಯವರೆಗೆ ಬರುವ ಮೋಟು ತೋಳಿನ ಜುಬ್ಬ ಧರಿಸಿದ್ದಾನೆ, ಅದರ ಬಣ್ಣ ತಿಳಿನೀಲಿಯಾಗಿದೆ. ಅವನ ಹೆಗಲ ಮೇಲೆ ರೆಕ್ಕೆಗಳಿರಬೇಕಾದ ಸ್ಥಾನದಲ್ಲಿ ಈಜು ರೆಕ್ಕೆ(fin)ಗಳಿವೆ. ನನ್ನನ್ನು ನೋಡಿದ ಕೂಡಲೆ ಅವನು ಒಂದು ಕಂಬದತ್ತ ಹೊರಳಿ ನಾನು ಮುಂದೆ ಸಾಗಿ ಹೋಗಲು ಜಾಗ ಮಾಡಿಕೊಟ್ಟ, ನಾನಿನ್ನೂ ಹೊಸ್ತಿಲು ದಾಟಿರಲಿಲ್ಲ, ಅಷ್ಟರಲ್ಲಿ ಮನಮೋಹಕ ಮಧುರ ಧ್ವನಿ ನನ್ನ ಕಿವಿಗಳ ಮೇಲೆ ಬೀಳುತ್ತದೆ. ಇಲ್ಲಿ ನೀರು ವರ್ಣವೈವಿಧ್ಯದಿಂದ ಕೂಡಿದೆ, ನೆಲದ ಮೇಲೆ ಚಿಪ್ಪಿನಿಂದ ಹೊರಬಂದ ಮುತ್ತುಗಳನ್ನು ಎರಚಲಾಗಿದೆ,

ಪ್ರವೇಶ ಸ್ಥಳ ಮತ್ತು ಕಮಾನು ಚಾವಣಿ ಇವುಗಳಿಂದ ನೀರು ತೊಟ್ಟಿಕ್ಕುವುದರಿಂದ ಉಂಟಾಗುವ ಲಲಿತವಾದ, ಸಣ್ಣ ನೀರ್ಗಲ್ಲುಗಳು ತೂಗುತ್ತಿವೆ, ಅವು ಕ್ಷೀರಸ್ಫಟಿಕದಂತಿವೆ, ಮತ್ತು ಹವೆಯಲ್ಲಿ ಉಲ್ಲಾಸಕರ ಸುಗಂಧ ತುಂಬಿಕೊಂಡಿದೆ. ಎಲ್ಲ ಬದಿಗಳಲ್ಲಿ ಉಪ್ಪರಿಗೆಯ ಕೈಸಾಲೆ(gallery)ಗಳು, ಮೂಲೆಗಳು, ಗೂಡುಗಳು ತೆರೆದುಕೊಳ್ಳುತ್ತವೆ, ಆದರೆ ನೇರವಾಗಿ ನನ್ನ ಮುಂದೆ ಇರುವ ಭವ್ಯ ಪ್ರಕಾಶವನ್ನು ನೋಡುತ್ತೇನೆ ಮತ್ತು ಅದರತ್ತ ಹೆಜ್ಜೆ ಇಡುತ್ತ ಹೋಗುತ್ತೇನೆ. ಈ ಪ್ರಕಾಶ ಬಂಗಾರ ಬಣ್ಣ, ಬೆಳ್ಳಿ ಬಣ್ಣ, ಇಂದ್ರನೀಲ ಬಣ್ಣ, ಪಚ್ಚೆ (ಗಾಢ ಹಸಿರು) ಬಣ್ಣ, ಮಿರುಗು ಕೆಂಪು ಬಣ್ಣ (ruby) ಇವೆಲ್ಲವುಗಳಿಂದ ಕೂಡಿಕೊಂಡು ವಿಸ್ತಾರವಾಗಿದ್ದ ಕಿರಣಗಳಿಂದಾಗಿದೆ. ಈ ಕಿರಣಗಳು ನನ್ನಿಂದ ಬಹಳ ದೂರದಲ್ಲಿರುವ ಬಿಂದುವಿನಿಂದ ಹೊರಹೊಮ್ಮುತ್ತಿದ್ದುದರಿಂದ ಅದೇನಿದೆಯೆಂದು ವ್ಯತ್ಯಾಸ ಗುರುತಿಸಿ ನೋಡಲಾಗಲಿಲ್ಲ. ಈ ಕಿರಣಗಳು ಎಲ್ಲ ದಿಕ್ಕುಗಳಲ್ಲಿ ಹರಿದು ಹೋಗುತ್ತಿದ್ದವು. ಅವುಗಳ ಸಾಮರ್ಥ್ಯಪೂರ್ಣ ಆಕರ್ಷಣೆ ನನ್ನನ್ನು ಕೇಂದ್ರದತ್ತ ಎಳೆಯುತ್ತಿರುವ ಭಾವನೆ ನನಗೆ ಬರುತ್ತಿದೆ.

ನಾನೀಗ ಈ ಕಿರಣಗಳ ಮೂಲವನ್ನು ನೋಡಬಲ್ಲವಳಾಗಿದ್ದೇನೆ, ಭವ್ಯ ಕಾಮನಬಿಲ್ಲಿನ ತೇಜೋಮಂಡಲವಿರುವ ಅಂಡಾಕಾರದ ಬಿಳಿಪ್ರಕಾಶವನ್ನು ನೊಡುತ್ತೇನೆ. ಆ ಅಂಡಾಕಾರದ್ದು ಸಮತಲದಲ್ಲಿ ಒರಗಿಕೊಂಡಿದೆ. ಆ ಪ್ರಕಾಶ ಯಾರೋ ಒಬ್ಬರನ್ನು ನನಗೆ ಕಾಣಿಸದಂತೆ ಅಡಗಿಸಿಟ್ಟಿದೆ ಎಂಬ ಭಾವನೆ ನನಗೆ ಬರುತ್ತಿದೆ. ನಾನು ಆ ಪ್ರಕಾಶದಲ್ಲಿ ಹಣಿಕಿ ನೋಡುತ್ತ ಆ ಕಾಮನಬಿಲ್ಲಿನ ಹೊರ ತುದಿಯಲ್ಲಿ ದೀರ್ಘಕಾಲ ನಿಂತುಕೊಳ್ಳುತ್ತೇನೆ, ಅಂತಹ ಭವ್ಯತೆಯಲ್ಲಿ ಯಾರು ನಿದ್ರಿಸುತ್ತಿದ್ದಾರೆಂದು ನೋಡಲು ಬಯಸುತ್ತೇನೆ. ಈ ರೀತಿಯಲ್ಲಿ ವ್ಯತ್ಯಾಸ ಗುರುತಿಸುವುದು ಸಾಧ್ಯವಾಗದೆ ಹೋದುದರಿಂದ ನಾನು ಆ ಕಾಮನಬಿಲ್ಲಿನೊಳಗೆ ನಂತರ ಆ ಅಂಡಾಕಾರದ ಪ್ರಕಾಶದಲ್ಲಿ ಪ್ರವೇಶಿಸುತ್ತೇನೆ. ಈಗ ಮರಳು ದಿಬ್ಬವೆಂದು ಕಂಡುಬರುವಂತಹದರ ಮೇಲೆ ಅಚ್ಚರಿಗೊಳಿಸುವ ಸತ್ತೆಯೊಂದು ಒರಗಿಕೊಂಡಿರುವುದನ್ನು ನೋಡುತ್ತೇನೆ. ಅವನ ಬಳಕುವ, ಹೋಲಿಸಲು ಸಾಧ್ಯವಿಲ್ಲದಷ್ಟು ಸುಂದರವಾದ ದೇಹ ಉದ್ದವಾದ ನಿಲುವಂಗಿ ಧರಿಸಿದೆ. ಅವನು ಮಡಿಚಿದ ತೋಳುಗಳ ಮೇಲೆ ತಲೆಯನ್ನಿಟ್ಟು ವಿಶ್ರಮಿಸುತ್ತಿದ್ದ. ನಾನು ಕೇವಲ ಅವನ ಉದ್ದ ಕೂದಲುಗಳನ್ನು ನೋಡಲು ಶಕ್ತಳಾಗಿದ್ದೇನೆ, ಅವು ಅವನ ಹೆಗಲ



ಮೇಲಿಂದ ಹರಿಯುತ್ತ ಹೋಗಿವೆ. ಈ ಅದ್ಭುತ ದೃಶ್ಯವನ್ನು ಕಂಡು ಸಾಮರ್ಥ್ಯಪೂರ್ಣ ಹಾಗೂ ಮಧುರ ಭಾವನೆ ಹಾಗೂ ಪೂಜ್ಯ ಭಾವನೆ ನನ್ನೊಳಗಿಂದ ಹರಿದು ಬರುತ್ತಿವೆ.

ಅಲ್ಲಿ ಮಲಗಿದ್ದವನಿಗೆ ನಾನಿರುವುದರ ಭಾವನೆ ಬಂದಿತೆ? ಈಗ ಅವನು ಎಚ್ಚತ್ತುಕೊಳ್ಳುತ್ತಾನೆ ಮತ್ತು ತನ್ನ ಎಲ್ಲ ನಯನಾಜೂಕಿನೊಂದಿಗೆ, ಸೌಂದರ್ಯ–ದೊಂದಿಗೆ ಎದ್ದೇಳುತ್ತಾನೆ. ಅವನು ನನ್ನೆಡೆಗೆ ಹೊರಳುತ್ತಾನೆ, ಅವನ ಕಣ್ಣುಗಳು ನನ್ನ ಕಣ್ಣುಗಳನ್ನು ಸಂಧಿಸುತ್ತವೆ. ಆ ಕಣ್ಣುಗಳು ನೀಲಲೋಹಿತವಾಗಿವೆ, ಹೊಳೆಯುತ್ತಿವೆ, ಅನಂತ ಮಾಧುರ್ಯ ಹಾಗೂ ಕೋಮಲತೆಗಳಿಂದ ಕೂಡಿಕೊಂಡಿವೆ. ಅವನು ಒಂದೂ ಶಬ್ದವನ್ನುಚ್ಚರಿಸದೆ ನನ್ನನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸುತ್ತಾನೆ. ಅವನ ಸ್ವಾಗತಕ್ಕೆ ನನ್ನ ಇಡೀ ಸತ್ತೆ ಸಂತೊಷದಿಂದ ಪ್ರತಿಸ್ಪಂದಿಸುತ್ತದೆ. ಅವನು ಬಿಟ್ಟು ಬಂದಿದ್ದ ಮಂಚದತ್ತ ನನ್ನನ್ನು ಕೈಹಿಡಿದು ಕರೆದುಕೊಂಡು ಹೋಗುತ್ತಾನೆ. ಬಿಳಿಯ ಬಣ್ಣ ಗಾಢವಾಗಿರುವ ಈ ಮೆತ್ತನೆಯಿರುವುದರ ಮೇಲೆ ಒರಗಿಕೊಳ್ಳುತ್ತೇನೆ ಮತ್ತು ಸಾಮರಸ್ಯದಿಂದ ಕೂಡಿದ ಅವನ ಮುಖಭಾವ ನನ್ನ ಮೇಲೆ ಬಾಗುತ್ತದೆ. ನನ್ನ ದೇಹದ ಪ್ರತಿಯೊಂದು ಜೀವಕೋಶವನ್ನು ಸಚೇತನಗೊಳಿಸುತ್ತ, ಪುನಶ್ಚೇತನಗೊಳಿಸುತ್ತ ಶಕ್ತಿಯ ಮಧುರ ಹರಿವು ನನ್ನನ್ನು ಇಡಿಯಾಗಿ ವ್ಯಾಪಿಸಿತು.

ನಂತರ ಕಾಮನಬಿಲ್ಲಿನ ಭವ್ಯ ಬಣ್ಣಗಳಿಂದ ಸುತ್ತುವರಿದುಕೊಂಡು, ಇಂಪಾದ ಸಂಗೀತದ ಮತ್ತು ಆಹ್ಲಾದಕರ ಸುಗಂಧಗಳ ಹೊದಿಕೆಗೊಳಗಾಗಿ ಆ ಸಾಮರ್ಥ್ಯಪೂರ್ಣ ಹಾಗೂ ಕೋಮಲತೆಯಿಂದ ಕೂಡಿದ ದೃಷ್ಟಿಯಡಿಯಲ್ಲಿ ನಾನು ಪರಮಾನಂದದಾಯಕ ವಿರಾಮದಲ್ಲಿ ನಿದ್ರೆ ಮಾಡಿದೆ. ಮತ್ತು ನನ್ನ ನಿದ್ರೆಯಲ್ಲಿ ಸುಂದರವಾದ ಹಾಗೂ ಉಪಯುಕ್ತವಾದ ಅನೇಕ ವಿಷಯಗಳನ್ನು ಕಲಿತುಕೊಂಡೆ.

ಶಬ್ದಗಳ ಸದ್ದಿಲ್ಲದೆ ಅರ್ಥಮಾಡಿಕೊಂಡ ಅದ್ಭುತ ಸಂಗತಿಗಳಲ್ಲಿ ಕೇವಲ ಒಂದು ಸಂಗತಿಯನ್ನು ಎತ್ತಿಹೇಳುತ್ತೇನೆ.

ಸೌಂದರ್ಯವಿರುವ ಮತ್ತು ತೇಜಸ್ಸಿರುವ, ಪರಿಪೂರ್ಣತೆಗಾಗಿ ಪ್ರಗತಿಯಿರುವ ಎಲ್ಲೆಡೆಯಲ್ಲಿ, ಅದು ಎತ್ತರದ ಮೇಲಿರುವ ಸ್ವರ್ಗಗಳಲ್ಲಾಗಲಿ ಇಲ್ಲವೆ ಆಳಗಳಲ್ಲಿರುವ ಸ್ವರ್ಗಗಳಲ್ಲಾಗಲಿ ಅಲ್ಲಿ ನಿಶ್ಚಿತವಾಗಿ ಮನುಷ್ಯನ ರೂಪದಲ್ಲಿ

ಹಾಗೂ ವೇಷದಲ್ಲಿ ಇರುವ ಸತ್ತೆಗಳು ನಿಶ್ಚಿತವಾಗಿ ಕಂಡುಬರುತ್ತವೆ – ಪಾರ್ಥಿವ ಉತ್ಕ್ರಾಂತಿಗಾಗಿ ಮನುಷ್ಯ ಪರಮೋಚ್ಚ ನಿಯೋಗಿ (agent) ಯಾಗಿದ್ದಾನೆ.

*

## ದರ್ಶನ – 2

ನಾನು ನಿದ್ರಿಸಿದ್ದೆ, ಈಗ ಎಚ್ಚತ್ತಿದ್ದೇನೆ.

ನಾನು ತೀವ್ರಗತಿಯಿಂದ ಪೂರ್ವ ದಿಕ್ಕಿನತ್ತ ಪ್ರಯಾಣ ಕೈಕೊಳ್ಳುತ್ತಿದ್ದೇನೆ. ಚಿಕ್ಕ ನೇರಳೆ ಬಣ್ಣದ ಮೋಡವೊಂದು ನನ್ನನ್ನು ಹೊತ್ತುಕೊಂಡು ಹೋಗುತ್ತಿದೆ. ಅದು ನನ್ನನ್ನು ಪೂರ್ತಿಯಾಗಿ ಆವರಿಸಿಕೊಳ್ಳುತ್ತದೆ, ದಾರಿಯಲ್ಲಿ ಬೇರೇನನ್ನೂ ನೋಡದಂತೆ ತಡೆಗಟ್ಟುತ್ತದೆ.

ಕೆಲ ಸಮಯದ ನಂತರ ನನ್ನನ್ನು ನೆಲದ ಮೇಲೆ ಇರಿಸುತ್ತಿರುವುದರ ಭಾವನೆ ಬರುತ್ತದೆ ಮತ್ತು ಮೋಡ ಹಿಂದೆ ಸರಿದು ಹೋಗುತ್ತದೆ. ನಾನು ಎತ್ತರವಾದ ಬಿಳಿ ಬಣ್ಣದ ಗೋಡೆಯ ಬಳಿ ನಿಂತಿದ್ದೇನೆ, ಅದರತ್ತ ಗಮನ ಹರಿಸುತ್ತೇನೆ. ಛಾಯೆಗಳು ಗುಟ್ಟಾಗಿ ಗೋಡೆಗುಂಟ ನಿಧಾನವಾಗಿ ಹರಿದು ಬರುವುದನ್ನು ನೋಡುತ್ತೇನೆ. – ಆ ಛಾಯೆಗಳು ಒಬ್ಬರ ಹಿಂದೆ ದೂರದಲ್ಲಿ ಇನ್ನೊಬ್ಬರಂತೆ ಸಾಗಿ ಹೋಗುತ್ತಿರುವ ಮನುಷ್ಯರವಾಗಿವೆ, ಅವರು ಯಾರೂ ತಮ್ಮನ್ನು ನೋಡದಿರಲಿ ಎಂಬ ಭಾವನೆ ಹೊಂದಿರುವಂತಿದೆ. ಅವರು ನೇರಳೆ ಬಣ್ಣದ ಮತ್ತು ಮಂಡಿಯವರೆಗೆ ಬರುವ ಮೋಟು ತೋಳಿನ ಜುಬ್ಬ (tunic) ವನ್ನು, ತಲೆಯ ಮೇಲೆ ವೃತ್ತಾಕಾರದ ಕುಂಚಿಗೆ (hood) ಯನ್ನು ಧರಿಸಿದ್ದಾರೆ, ಕುಂಚಿಗೆಯನ್ನು ಬಹುಮಟ್ಟಿಗೆ ಮುಖವನ್ನು ಮುಚ್ಚಿಡುವಂತೆ ತಲೆಯಿಂದ ಕೆಳಗೆಳೆದಿದ್ದಾರೆ. ಗೋಡೆಯಲ್ಲಿರುವ ಚಿಕ್ಕ ಬಾಗಿಲೊಳಗಿಂದ ಅವರು ಒಬ್ಬರ ನಂತರ ಒಬ್ಬರಂತೆ ಹೋಗಿ ಮಾಯವಾಗುತ್ತಾರೆ. ಇಷ್ಟೊಂದು ಕಾಳಜಿಪೂರ್ವಕ ಅವರೆಲ್ಲಿಗೆ ಹೋಗುತ್ತಿದ್ದಾರೆ ಎಂಬುದನ್ನು ನೋಡಲು, ಅವರಾರಿಗೂ ಕಾಣಿಸಿಕೊಳ್ಳದಂತೆ ನಾನು ಅವರನ್ನು ಅನುಸರಿಸಿ ಹೊಗುತ್ತೇನೆ.

ಚಿಕ್ಕ ಬರಿದಾದ ಬಿಳಿ ಬಣ್ಣದ ಕೋಣೆಯಿಂದ ದಾಟಿ ಹೋದಾಗ ನಾನು ಒಂದು ಅಂಗಳದಲ್ಲಿರುವಂತೆ ನನ್ನನ್ನು ಕಂಡುಕೊಳ್ಳುತ್ತೇನೆ, ಆ ಅಂಗಳ ಕಮಾನುಗಳಿಂದ ಸುತ್ತುವರಿದಿದೆ ಮತ್ತು ಅಲ್ಲಿ ಕಿತ್ತಳೆ ಹಣ್ಣಿನ ಗಿಡಗಳಿವೆ, ಅವು



ಸುಂದರವಾದ ಬಂಗಾರ ವರ್ಣದ ಹಣ್ಣುಗಳನ್ನು ಹೊತ್ತುಕೊಂಡು ನಿಂತಿವೆ. ಅಂಗಳದ ಮಧ್ಯದಲ್ಲಿ ಒಂದು ಕಾರಂಜಿಯಿದೆ, ಅದರೊಂದಿಗೆ ಯಥೇಚ್ಛವಾಗಿ ನೀಲಿ, ಹಸಿರು, ಮತ್ತು ಬಿಳಿ ಬಣ್ಣಗಳ ವೈವಿಧ್ಯವಿರುವ ಬೋಗುಣಿ (basin) ಯಿದೆ, ಅದರಿಂದ ಸಣ್ಣ ಪ್ರಮಾಣದಲ್ಲಿ ನೀರು ಚಿಮ್ಮಿ ಬರುತ್ತಿದೆ. ಕಾರಂಜಿಯ ಕಲಕಲ ಶಬ್ದ ಮಾತ್ರ ಅಲ್ಲಿರುವ ಮೌನವನ್ನು ಮುರಿಯುತ್ತದೆ, ಏಕೆಂದರೆ ಅಂಗಳ ನಿರ್ಜನವಾಗಿದೆ, ನಾನು ಅದನ್ನು ದಾಟಿಕೊಂಡು ಹೋಗಿ ಇನ್ನೆರಡು ಕೋಣೆಗಳೊಳಗಿಂದ ಸಾಗಿ ಹೋಗುತ್ತೇನೆ, ಅವು ಕೂಡ ಬರಿದಾಗಿವೆ. ಕೊನೆಗೆ ಅಟ್ಟವಿರುವಲ್ಲಿಗೆ ಬರುತ್ತೇನೆ, ಅದರ ಮೇಲೆ ಹತ್ತಿ ಹೋಗಿ ಚೌಕಾಕಾರದ ಮೇಲ್ಮಾಳಿಗೆಯತ್ತ ಹೋಗುತ್ತೇನೆ.

ಮೂಲೆಯೊಂದರಲ್ಲಿ ಗಾದಿಗಳ ಮೇಲೆ ಒರಗಿಕೊಂಡಿರುವ, ಅರ್ಧ ಪರದೆಯ ಹಿಂದಿರುವಂತೆ ಕಾಣುವ ಮನುಷ್ಯನನ್ನು ನೋಡುತ್ತೇನೆ, ಅವನ ಪ್ರಭಾಮಂಡಲ (aura) ಭವ್ಯ ಕಡುಗೆಂಪಿನದಾಗಿದೆ, ಚಲಿಸುತ್ತಿರುವ ಚಿಕ್ಕ ಬಂಗಾರ ವರ್ಣದ ಕಿಡಿಗಳಿಂದ ತುಂಬಿಕೊಂಡಿದೆ. ಅವನು ಮೇಲಕ್ಕೇಳುತ್ತಾನೆ. ಅವನು ಸುಂದರನಾಗಿ ಕಾಣುವ ವಯಸ್ಸಾದ ಮನುಷ್ಯನಾಗಿದ್ದಾನೆ, ನೇರಳೆ ಬಣ್ಣದ ಅವನ ಟೊಪ್ಪಿಗೆಯ ಕೆಳಗೆ ಕಾಣುವ ಕೂದಲು ಹಾಗೂ ಅವನ ಗಡ್ಡ ಹಿಮದಷ್ಟು ಬೆಳ್ಳಗಾಗಿವೆ. ಅವನ ನಿಲುವು ಪ್ರಭಾವಯುತವಾಗಿದೆ, ಗಾಂಭೀರ್ಯವುಳ್ಳದ್ದಾಗಿದೆ. ಅವನು ನೇರಳೆ ಬಣ್ಣದ, ವಿಶಾಲವಾಗಿ ಹರಡಿಕೊಂಡ ನಿಲುವಂಗಿಯನ್ನು ಧರಿಸಿದ್ದಾನೆ, ಅದರ ನಡುಪಟ್ಟಿ ಕಡುಗೆಂಪಿನದಾಗಿದೆ, ಕೈಯಲ್ಲಿ ಅವನು ಬಂಗಾರ ವರ್ಣದ ಕತ್ತರಿಯನ್ನು ಹಿಡಿದುಕೊಂಡಿದ್ದಾನೆ. ಅವನು ಯಾರೋ ಒಬ್ಬರು ಬರುವುದರ ದಾರಿ ಕಾಯುತ್ತಿರುವಂತೆ ತೋರಿಬರುತ್ತಾನೆ.

ಈಗ ನಾನು ವಯಸ್ಸಾದ ಆ ಮನುಷ್ಯನನ್ನು ಅವಲೋಕಿಸುತ್ತಿದ್ದಾಗ ಗೋಡೆಯ ಬಳಿ ಸರಿದು ಹೋಗುತ್ತಿದ್ದ ಜನರು ಒಬ್ಬೊಬ್ಬರಾಗಿ ಪ್ರವೇಶಿಸುವುದನ್ನು ನೋಡಿದೆ. ಮೌನದಲ್ಲಿ ಅವರು ಸಾಲು ಸಾಲಾಗಿ ಮೇಲ್ಛಾವಣಿಯ ತುದಿಯಲ್ಲಿ ನಿಲ್ಲತೊಡಗುತ್ತಾರೆ. ಅವರ ನಂತರ ಬಿಳಿ ವಸ್ತ್ರ ಧರಿಸಿದ ಇನ್ನಿತರರು ಬರುತ್ತಾರೆ, ಅವರು ಮೊದಲು ಬಂದವರ ಮುಂದೆ ನಿಂತುಕೊಳ್ಳುತ್ತಾರೆ.

ಎಲ್ಲರೂ ನಿಶ್ಚಲರಾಗಿ ನಿಂತುಕೊಂಡಿದ್ದಾರೆ, ಮೌನದಿಂದಿದ್ದಾರೆ ಅವರ ನೇತಾರನೆಂದು ಕಂಡುಬರುವವನೊಬ್ಬ ಅಟ್ಟದ ಮುಖ್ಯ ಭಾಗದ ಎದುರಿಗೆ ಬಹಳ ವಿಧ್ಯುಕ್ತವಾಗಿ ನಿಂತುಕೊಳ್ಳುತ್ತಾನೆ. ಕ್ರಮೇಣ ಗಾಳಿಯಲ್ಲಿ ಪ್ರಜ್ವಲತೆ (glow) ಯೊಂದು

ವ್ಯಾಪಿಸಿಕೊಳ್ಳುತ್ತಿದೆ, ಅದು ತನ್ನ ಪ್ರಕಾಶವನ್ನು ನಿಶ್ಚಲರಾಗಿ ನಿಂತವರ ಮೇಲೆ ಚೆಲ್ಲುತ್ತದೆ. ನಾನು ಈ ಪ್ರಕಾಶದ ಮೂಲವನ್ನು ಗುರುತಿಸಲು ತಿರುಗಿ ನೋಡುತ್ತಿದ್ದ ಹಾಗೆ ಸುಮಾರು ಹದಿನಾಲ್ಕು ವರ್ಷದ ಹುಡುಗ ಮೇಲ್ಮಾಳಿಗೆಯ ಅಟ್ಟದ ಮೇಲೆ ಹತ್ತಿ ಬರುತ್ತಿರುವುದನ್ನು ನೋಡುತ್ತೇನೆ. ಅವನನ್ನು ಸುಂದರ ಶ್ವೇತ ತೇಜಸ್ಸು ಸುತ್ತುವರಿದಿದೆ, ಅದರಲ್ಲಿ ವರ್ಣವೈವಿಧ್ಯವಿರುವ ಮಿನುಗುಗಳು ಕಂಡುಬರುತ್ತವೆ. ಅವನ ಮಾಸಲು ಹಳದಿ ಮಿಶ್ರಿತ ಕಂದು ಬಣ್ಣದ ಕೂದಲು ಅವನ ತೋಳುಗಳ ಮೇಲೆ ಸುಂದರ ಮೈಕಟ್ಟಿನ ರೂಪ ಕೊಡುವಂತೆ ಬೀಳುತ್ತವೆ. ಅವನ ಮುಖಛಾಯೆ ಸೊಗಸಾಗಿದೆ, ಕೋಮಲವಾಗಿದೆ, ಅವನ ಕಣ್ಣಿನ ಉದ್ದುದ್ದ ರೆಪ್ಪೆಗಳು ಗುಲಾಬಿ ಬಣ್ಣದ ಗಲ್ಲಗಳ ಮೇಲೆ ವಿರಮಿಸುತ್ತವೆ, ಏಕೆಂದರೆ ಅವನ ಕಣ್ಣುಗಳು ಕೆಳ ಮುಖ ಮಾಡಿವೆ. ಅವನು ನಸು ಬಣ್ಣ ಹಾಕಿದ ಆಕಾಶ ನೀಲಿ ನಿಲುವಂಗಿ ಧರಿಸಿದ್ದಾನೆ, ಅದಕ್ಕೆ ಬಿಳಿ ಬಣ್ಣದ ರೇಶಿಮೆ ನಡುಕಟ್ಟಿದೆ, ಕಾಲಲ್ಲಿ ಪಾದರಕ್ಷೆ ಧರಿಸಿದ್ದಾನೆ. ನಿಧಾನವಾಗಿ ಮುಂದೆ ಸಾಗುತ್ತ ಅವನು ಆ ವಯಸ್ಸಾದ ಮನುಷ್ಯನ ಎದುರಿಗೆ ಒಂದು ಹೆಜ್ಜೆ ಇಟ್ಟು ನಿಲ್ಲುತ್ತಾನೆ. ಮತ್ತು ಅವನಿಗೆ ಮೌನದಿಂದ ತಲೆಬಾಗುತ್ತಾನೆ. ಆಗ ಆ ವಯಸ್ಸಾದ ಮನುಷ್ಯ ಆಳವಾದ, ಮೃದುವಾದ ಧ್ವನಿಯಲ್ಲಿ ಮಾತನಾಡುತ್ತಾನೆ, ಅವನಾಡುವ ಭಾಷೆ ನನಗೆ ಅಪರಿಚಿತ, ನನಗೆ ಅದು ಅರ್ಥವಾಗುವುದಿಲ್ಲ.

ನಾನು ನಿದ್ದೆ ಮಾಡಿದೆ ಮತ್ತು ಈಗ ಆ ವಯಸ್ಸಾದ ಮನುಷ್ಯನ ಶಬ್ದಗಳು ನನಗೆ ಅರ್ಥವಾಗುತ್ತಿವೆ. ಅವನು ಆ ಹುಡುಗನಿಗೆ: "ಹೀಗೆ ನಿನಗೆ ಒಪ್ಪಿಸಿದ ಕಾರ್ಯವನ್ನು ನೀನು ನಿರ್ವಹಿಸಲಿರುವ ಸಮಯ ಬಂದಿದೆ, ಈ ಕಾರ್ಯವನ್ನು ನೀನು ನಿನ್ನ ಮುಕ್ತ ಸಂಕಲ್ಪದಿಂದ ಸ್ವೀಕರಿಸಿರುವಿ. ನಾನು ನಿನಗೆ ನೀಡಿದ ಬೋಧನಾರೂಪದ ಸೂಚನೆಗಳಿಗನುಸಾರವಾಗಿ ನೀನಿದನ್ನು ನಿರ್ಭೀತನಾಗಿ, ದುರ್ಬಲನಾಗದೆ ಸಿದ್ಧಿಸಿಕೊಳ್ಳುವಿ. ಏಕೆಂದರೆ ನಾವು ಏಕವಾಗಿದ್ದೇವೆ, ನಮ್ಮ ಪ್ರೇಮ ಇಲ್ಲವೆ ರಕ್ಷಣೆ ಎಂದಿಗೂ ನಿನ್ನ ಕೈಬಿಡುವುದಿಲ್ಲ ಎಂಬುದು ನಿನಗೆ ತಿಳಿದಿದೆ. ನೀನು ನಿರ್ವಹಿಸಲಿರುವ ಕಾರ್ಯದ ಗಾತ್ರದ ಬಗ್ಗೆ ಹಾಗೆಯೇ ನಿಸ್ಸಂಶಯವಾಗಿ ಎದುರಿಸಲಿರುವ ಎಲ್ಲ ಅಪಾಯಗಳ ಬಗ್ಗೆ ಮತ್ತು ಸಂದೇಹ ಹುಟ್ಟಿಸದ ಪ್ರಲೋಭನೆಗಳ ಬಗ್ಗೆ ನಿನಗೆ ತಿಳಿದಿದೆ, ಆದರೆ ಒಳ್ಳೆಯ ಹೃದಯವುಳ್ಳವನಾಗು, ಹೋರಾಟ ಕಠಿಣವಾದಾಗ್ಯೂ ಕೂಡ ವಿಜಯ ನಿಶ್ಚಿತ. ಮಗು, ನೀನು ಪಶ್ಚಿಮ ದಿಕ್ಕಿನತ್ತ ಹೋಗಲಿರುವಿ ನಮ್ಮ ಅತ್ಯುಚ್ಚ ಆಶೀರ್ವಾದಗಳು ನಿನ್ನೊಂದಿಗೆ ಇರುವಂತಾಗಲಿ."



ಈ ಶಬ್ದಗಳನ್ನು ಉಚ್ಚರಿಸುತ್ತ ಅವನು ಮುಂದೆ ಬಾಗುತ್ತಾನೆ ಮತ್ತು ಆ ಹುಡುಗನ ಹಣೆಯ ಬಿಳಿಭಾಗದ ಮೇಲೆ ಆಳವಾದ ಮುತ್ತನ್ನು ಕೊಡುತ್ತಾನೆ, ನಂತರ ಬಂಗಾರ ಬಣ್ಣದ ಕತ್ತರಿಯಿಂದ ಆ ಹುಡುಗನ ಕೂದಲುಗಳಲ್ಲಿಯ ಒಂದು ಭಾಗವನ್ನು ಕತ್ತರಿಸುತ್ತಾನೆ. ಬಂದ ತುಂಡು ತನ್ನ ನಿಲುವಂಗಿಯ ಒಳಗೆ ಜಾರಿ ಹೋಗುವಂತೆ ಮಾಡುತ್ತಾನೆ.

ನಂತರ ಒಂದೂ ಶಬ್ದವನ್ನುಚ್ಚರಿಸದೆ, ಸನ್ನೆ ಮಾಡದೆ ಆ ಹುಡುಗ ನಿಧಾನವಾಗಿ ಮೇಲ್ಮಾಳಿಗೆಗೆ ಕರೆದೊಯ್ಯುವ ಮೆಟ್ಟಿಲುಗಳ ಮೇಲಿಂದ ಕೆಳಗಿಳಿದು ಹೋಗುತ್ತಾನೆ, ನಾನು ಅವನನ್ನು ಅನುಸರಿಸಿಕೊಂಡು ಹೋಗುತ್ತೇನೆ ಮತ್ತು ಅವನು ಮನೆಯನ್ನು ಬಿಟ್ಟು ಗೋಡೆಗಳ ಪಕ್ಕದಲ್ಲಿ ತೀವ್ರಗತಿಯಿಂದ ಸಾಗುತ್ತಾನೆ, ತನ್ನೆದುರಿಗೆ ನೇರ ದೃಷ್ಟಿಯಿರಿಸಿ, ಮರ್ಯಾದೆಯಿಂದ ನಡೆಯುತ್ತಾನೆ, ಇದನ್ನು ನಾನು ನೋಡುತ್ತೇನೆ.

ಒಮ್ಮೆಗೆ ನನ್ನನ್ನು ಮತ್ತೆ ಮೋಡವೊಂದರಲ್ಲಿ ಕಂಡುಕೊಳ್ಳುತ್ತೇನೆ ಅದು ನನ್ನನ್ನು ಉಳಿದದ್ದೆಲ್ಲದರಿಂದ ಮುಚ್ಚಿಟ್ಟು ಹೊತ್ತುಕೊಂಡು ಹೋಗುತ್ತದೆ. ಒಮ್ಮೆ ಮಾತ್ರ ಅದು ಮತ್ತೆ ತೆರೆದುಕೊಳ್ಳುತ್ತದೆ. ಆಗ ನಾನು ಆಶ್ಚರ್ಯದಿಂದ ಒಂದು ದೊಡ್ಡ ನದಿಯನ್ನು ನೋಡುತ್ತೇನೆ, ಅದರ ನೀರು ಬೆಳದಿಂಗಳಲ್ಲಿ ಬೆಳ್ಳಿ ಪ್ರವಾಹ ರೂಪದಲ್ಲಿ ಹರಿಯುತ್ತಿರುವ ಹಾಗಿದೆ, ಅದರ ದಂಡೆಗಳ ಮೇಲೆ ಭವ್ಯ ಹಾಗೂ ಸೊಂಪಾಗಿ ಬೆಳೆದ ಸಸ್ಯರಾಶಿಯಿದೆ. ಇಲ್ಲಿ ಪ್ರತಿಯೊಂದೂ ದೈತ್ಯಾಕಾರದ ಪ್ರಮಾಣದಲ್ಲಿದೆ: ಆ ನದಿ ಕೆರೆಯಷ್ಟು ಅಗಲವಾಗಿದೆ, ಆಕಾಶವನ್ನು ಸ್ಪರ್ಶಿಸುತ್ತವೆಯೋ ಎನ್ನುವಂತಹ ಶಿಖೆಗಳನ್ನು ಹೊಂದಿದ ಗಿಡಮರಗಳಿವೆ, ಮತ್ತು ಅವುಗಳ ಹಿಂದೆ ದೃಷ್ಟಿಗೆ ಬೀಳದಷ್ಟು ವಿಸ್ತಾರವಾಗಿ ಚಾಚಿಕೊಂಡಿರುವ ಪರ್ವತಗಳಿವೆ, ಅವುಗಳ ಶಿಖರಗಳು ನಿರಂತರ ಹಿಮಾಚ್ಛಾದಿತವಾಗಿರುತ್ತವೆ.

ಈ ಅಗಾಧವಾದದ್ದರ ನಡುವೆ ಒಂದು ಚಿಕ್ಕ ಅಂಡಾಕೃತಿ(oval)ಯಲ್ಲಿ ಚಲಿಸುತ್ತಿರುವ ಪ್ರಕಾಶವನ್ನು ನೋಡುತ್ತೇನೆ, ಅದು ಆ ಬಾಲಕ ದೃಢವಾಗಿ, ನಿಶ್ಚಿತತೆಯಿಂದ, ಮರ್ಯಾದೆಯಿಂದ, ಭೀತಿ ಅಥವಾ ದೌರ್ಬಲ್ಯವಿಲ್ಲದೆ ತನ್ನ ದಾರಿ ಹಿಡಿದು ನಡೆದು ಹೋಗುವುದಾಗಿರುತ್ತದೆ.

ಈ ದೃಶ್ಯ ಘನಘಾಂಭೀರ್ಯದಿಂದ ಕೂಡಿದೆ, ನಾನು ಅದನ್ನು ಕುರಿತು ಧ್ಯಾನಿಸುತ್ತೇನೆ ಮತ್ತು ಅದರಲ್ಲಿ ತಲ್ಲೀನಳಾಗಿರುತ್ತೇನೆ ಹಾಗೂ ಅರ್ಥಮಾಡಿ–

ಕೊಳ್ಳುತ್ತೇನೆ: ಮನುಷ್ಯನೊಬ್ಬ ತನ್ನ ಬಲದ ಔನ್ನತ್ಯದಲ್ಲಿ ಯಾವುದು ಸಿದ್ಧಿಸಿಕೊಳ್ಳಲು ಕಷ್ಟದಾಯಕವಾಗಿರುತ್ತದೆಯೋ ಅಂತಹದನ್ನು ಮಗುವೊಂದು, ಅವನೊಂದಿಗೆ ಏಕವಾಗಿರುವ ಸಾಮರ್ಥ್ಯ ಹಾಗೂ ದೈವಿಕವಾದ ಪ್ರೇಮ ಆಧಾರ ಒದಗಿಸಿದಾಗ, ಯಾವ ತೊಂದರೆಯೂ ಇಲ್ಲದೆ ಸಿದ್ಧಿಸಿಕೊಳ್ಳಬಹುದು.

ಸ್ವಾಭಾವಿಕ ಒಲವಿನ ಮೂಲಕ ಅನುಕ್ರಮ ಶ್ರೇಣಿಯಲ್ಲಿ ಗುಂಪುಗೂಡುವಿಕೆ ವಿಜಯದತ್ತ ಕರೆದೊಯ್ಯುವ ನಿಶ್ಚಿತ ಹಾಗೂ ನಿಜವಾದ ಮಾರ್ಗವಾಗಿರುತ್ತದೆ.

*

## ದರ್ಶನ – 3

ನಾನು ನಿದ್ರೆಮಾಡಿದೆ, ಈಗ ನಾನು ಎಚ್ಚತ್ತುಕೊಂಡಿದ್ದೇನೆ.

ಯುರೋಪಿನ ರಾಜಧಾನಿಗಳಲ್ಲಿ ಅತ್ಯಂತ ಬೌದ್ಧಿಕವಾದವುಗಳಲ್ಲಿ ಒಂದು ರಾಜಧಾನಿಯಲ್ಲಿದ್ದ ಕಟ್ಟುನಿಟ್ಟಿನ ಮುಖ್ಯ ಚರ್ಚಿನಲ್ಲಿ ನಾನು ಎಚ್ಚತ್ತುಗೊಂಡೆ. ವೈಭವಯುತ ಹಾರ್ಮೋನಿಯಮ್ ಇತ್ಯಾದಿ ವಾದ್ಯಗಳು ಹೊರಡಿಸುವ ನಾದಗಳನ್ನು ಕೇಳಿ ಎಚ್ಚತ್ತುಗೊಂಡೆ, ಅವು ಚಕ್ರನಾಭಿ (nave) ಯಂತಿರುವ ಬಲಿಷ್ಠ ಕರೆ ಮತ್ತು ಉದಾರ ಅಭೀಪ್ಸೆಗಳಿಂದಾಗಿ ಮೇಲೆದ್ದು ಬರುವ ನಾದಗಳಾಗಿದ್ದವು. ಅಲ್ಲಿ ಮೇಲ್ಗಡೆ ದೃಷ್ಟಿ ಹರಿಸಿದಾಗ ಅಲ್ಲಿ ಧಾರ್ಮಿಕ ವಿಧಿಗಳ ಪ್ರಯೋಗ ಪುಸ್ತಕದ ಹತ್ತಿರ ಸುಂದರ ಕೂದಲುಳ್ಳ ತರುಣಿಯೊಬ್ಬಳನ್ನು ನೋಡಿದೆ, ಅವಳು ಬಿಳಿ ಬಣ್ಣದ ಉಡುಪು ಧರಿಸಿದ್ದಳು. ಅವಳ ಬೆರಳುಗಳು ಹಾರ್ಮೋನಿಯಮ್‌ದ ಪಟ್ಟಿಗಳನ್ನು ಸ್ಪರ್ಶಿಸಿದಾಗ ಸ್ಫೂರ್ತಿಗೊಂಡ ಮತ್ತು ಪ್ರೇಮದಿಂದ ತುಂಬಿಕೊಂಡ ಇಂಪಾದ ಸ್ವರಗಳು ಎತ್ತರಕ್ಕೇರಿ ಬರುತ್ತಿದ್ದವು.

ದೃಷ್ಟಿಯನ್ನು ಕೆಳಗಡೆ ಹರಿಸಿದಾಗ ಚರ್ಚು ಕ್ರಮೇಣ ಆತುರಗೊಂಡ ಜನಸಂದಣಿಯಿಂದ ತುಂಬಿಕೊಳ್ಳುತ್ತಿರುವುದನ್ನು ನೋಡುತ್ತೇನೆ, ಹೊರಗೆ ಸೊಂಪಾಗಿ ಕೇಳಿಬರುತ್ತಿದ್ದ ನಾದ ಅದನ್ನು ಆಕರ್ಷಿಸಿದೆ. ಅದೇ ವೇಳೆಗೆ ವಾದ್ಯಗಳಿರುವ ಚಾವಣಿ ನಿಧಾನವಾಗಿ ಹೆಚ್ಚುತ್ತಿರುವ ಉಜ್ವಲ ಪ್ರಕಾಶದಿಂದ ತುಂಬಿಕೊಳ್ಳುತ್ತಿದೆ ಮತ್ತು ಆ ಪ್ರಕಾಶ ಇಡೀ ಕಟ್ಟಡವನ್ನು ಆದ್ಯಂತವಾಗಿ ತುಂಬಿಬಿಡುತ್ತದೆ, ಕತ್ತಲೆಯನ್ನು ಹೊಡೆದೋಡಿಸುತ್ತದೆ. ಭವ್ಯ ಕಣ್ಣು ಕುಕ್ಕುವ ಬಿಳಿ ಬಣ್ಣದ ಪ್ರಕಾಶ ವೇದಿಕೆಯ ಮೇಲೆ ಬೀಳುತ್ತದೆ ಮತ್ತು ಅದು ಸ್ವಲ್ಪ ಚೆದರಿದಾಗ,



ಕ್ರಾಸ್, ಧಾರ್ಮಿಕ ಪ್ರತಿಮೆಗಳು, ಪೂಜೆಗಾಗಿರುವ ವಸ್ತುಗಳು ಮಾಯವಾಗುತ್ತವೆ. ಅದು ಅಗೋಚರ ಹಸ್ತವೊಂದು ಅದನ್ನೆಲ್ಲ ಧ್ವಂಸ ಮಾಡಿದ ಹಾಗಿದೆ.

ಅಲ್ಲಿ ಉಪಸ್ಥಿತರಿದ್ದವರೆಲ್ಲ ತಮ್ಮ ಸ್ಥಳಗಳಿಗೆ ಅಂಟಿಕೊಂಡಿದ್ದಾರೆ. ಆಶ್ಚರ್ಯ, ಕುತೂಹಲ ಹಾಗೂ ಭಯ ಇವುಗಳ ನಡುವೆ ವಿಭಜನೆಗೊಂಡಿದ್ದಾರೆ. ಚರ್ಚಿನ ಗಾಯಕ ವೃಂದದ ಎದುರಿನಲ್ಲಿ ಅವರು ಭವ್ಯ ನೇರಳೆ ಬಣ್ಣದ ಪರದೆಯೊಂದು ರೂಪ ತಾಳುವುದನ್ನು ಮತ್ತು ಸಾಂದ್ರವಾಗುತ್ತ ಬೆಳೆಯುವುದನ್ನು ಮತ್ತು ಎಲ್ಲರೂ ಓದಲು ಸಾಧ್ಯವಾಗುವ ಹಾಗೆ ಬಂಗಾರ ಬಣ್ಣದ ಪ್ರಕಾಶವಿರುವ ಅಕ್ಷರಗಳು ಶಾಸನವನ್ನು ರಚಿಸುವುದನ್ನು ನೋಡಿದಾಗ ಅವರ ಆಶ್ಚರ್ಯ ಹೆಚ್ಚಾಗುತ್ತದೆ. ಆ ಶಾಸನದಲ್ಲಿ ಬರೆದದ್ದು ಹೀಗಿದೆ:

ದಿವ್ಯಾತ್ಮ ನಿಮ್ಮ ದೇವನಾಗಿದೆ.
ನೀವು ದೈವೀ ನಿವಾಸಿಯ ಜೀವಂತ ದೇಗುಲವಾಗಿದ್ದೀರಿ,
ಓ ಉತ್ಕ್ರಾಂತಿ ಹೊಂದುತ್ತಿರುವ ಅತಿಮಾನವರೆ ಎಚ್ಚತ್ತುಕೊಳ್ಳಿರಿ.

ಉತ್ಕ್ರಾಂತಿ ಹೊಂದಿರಿ, ನಿಮ್ಮಲ್ಲಿ ಅಡಗಿರುವ ಕಾರ್ಯನಿರ್ವಾಹಕ ಶಕ್ತಿಯನ್ನು ಅಭಿವೃದ್ಧಿಗೊಳಿಸಿರಿ, ಅದರಿಂದಾಗಿ ಯೋಚನಾತೀತ ಪರಿಪೂರ್ಣ ದೇವನೊಂದಿಗೆ ಅವಿಚ್ಛೇದ್ಯ ಏಕತೆಯನ್ನು ಸಿದ್ಧಿಸಿಕೊಳ್ಳುವಂತಾಗುವುದು, ಸನಾತನ ದೈವಿಕವಾದ ದ್ರವ್ಯ ಮನುಷ್ಯನ ಮೂಲಕ ಆಧ್ಯಾತ್ಮಿಕ ಪುನರ್ಜನ್ಮ ಪಡೆದು, ವೈಭವೋಪೇತವಾಗಿ ಅವನ ಹಕ್ಕಿನ ಮನೆಯಾದ ಪೃಥ್ವಿಯ ಮೇಲೆ ಅಮರವಾಗುವುದು.

ಆಶ್ಚರ್ಯದ ಸ್ಥಿತಿ ಪರಾಕಾಷ್ಠೆಯನ್ನು ತಲುಪುತ್ತದೆ, ಯಾರೂ ಮುರಿಯಲು ಧೈರ್ಯಮಾಡದ ಮೌನದಲ್ಲಿ ಆಳವಾದ ಅನುರಣಿಸುವ ಧ್ವನಿ ಮೇಲಕ್ಕೆದ್ದು ಬರುತ್ತದೆ: "ಸಂಗೀತದ ಬೋಧನೆಗೆ ಕಿವಿಗೊಡಿರಿ" ಎಂದು ಹೇಳುತ್ತದೆ. ನಾನು ನೆಟ್ಟನೋಟವನ್ನು ಆರ್ಗನ್ ವಾದ್ಯದತ್ತ ಹೊರಳಿಸುತ್ತೇನೆ, ಆದರೆ ಆ ತರುಣಿ ಇನ್ನು ಮುಂದೆ ಕಾಣಿಸದಂತಾಗಿದ್ದಾಳೆ, ಅವಳನ್ನು ಉಜ್ವಲ ಬೆಳಕು, ಸಂಪೂರ್ಣವಾಗಿ, ಪರದೆಯ ಹಿಂದಿರಿಸಿದೆ. ದೂರದ ತುದಿಯಲ್ಲಿ ವೈವಿಧ್ಯಮಯ ವರ್ಣವುಳ್ಳ ಗುಲಾಬಿಯ ಅಲಂಕಾರದ ಎದುರಿನಲ್ಲಿ ವ್ಯಕ್ತಿಯ ನೆರಳುಗೆರೆಚಿತ್ರವನ್ನು ತೋರಿಸುವ ದೇವದೂತ (Seraph) ನೊಬ್ಬನನ್ನು ನಾನು ನೋಡುತ್ತೇನೆ. ಅವನು ಮನುಷ್ಯನ ಎತ್ತರಕ್ಕಿಂತ ಮೂರುಪಟ್ಟು ಎತ್ತರವಾಗಿದ್ದಾನೆ, ನೇರಳೆ ಬಣ್ಣದ ಮೋಟು ಜುಬ್ಬ

(tunic) ಧರಿಸಿದ್ದಾನೆ. ಅವನ ರೆಕ್ಕೆಗಳಲ್ಲಿ ಎರಡು ಅವನ ಸುಂದರ ತರುಣ ಶಿರದ ಹಿಂದೆ ಕತ್ತರಿ ಆಕಾರದಲ್ಲಿವೆ, ಇನ್ನೆರಡು ಅವನ ಪಾದಗಳನ್ನು ಮುಚ್ಚುವಂತೆ ನೆಲದ ಮೇಲೆ ಇಳಿಬಿದ್ದಿವೆ.

ಮತ್ತೊಮ್ಮೆ ಆರ್ಗನ್‌ದ ಧ್ವನಿಗಳು ಮೇಲೆದ್ದು ಕೇಳಿಬರುತ್ತವೆ. ಮೊದಲು ನಿರುತ್ಸಾಹಕರ ಮತ್ತು ಸದ್ದುಗದ್ದಲದಿಂದ ಕೂಡಿದವಾಗಿರುತ್ತವೆ. ಅವು ಮನುಷ್ಯನ ಸದ್ಯದ ಪರಿಸ್ಥಿತಿಯನ್ನು ಪ್ರತೀಕ ರೂಪದಲ್ಲಿ ಬಿಂಬಿಸುತ್ತವೆ. ಆ ಪರಿಸ್ಥಿತಿ ದುಃಖ, ವೇದನೆ ಹಾಗೂ ಸಂಶಯಗಳಿಂದ ಕೂಡಿದೆ. ನಂತರ ಒಮ್ಮೆಗೆ ಸ್ಫಟಿಕದ ಹಾಗೆ ನಿರ್ಮಲವಾದ ಧ್ವನಿ ಕೇಳಿಬರುತ್ತದೆ, ಅದು ವೇದನಾಪೂರ್ಣ ವಿಷಣ್ಣತೆಯನ್ನು, ಪ್ರಕಾಶದ ಕಿಡಿ ಅಂಧಕಾರವನ್ನು ಛೇದಿಸುವ ಹಾಗೆ, ಛೇದಿಸಿಕೊಂಡು ಬರುತ್ತದೆ. ಪರಿಶುದ್ಧ, ಇಂಪಾದ ಧ್ವನಿ ಬಿಚ್ಚಿಕೊಂಡು ಹರಡುತ್ತದೆ, ತಾರಕಕ್ಕೇರುತ್ತದೆ, ಬಲವತ್ತರವಾಗುತ್ತದೆ, ಅದರೊಡನೆ ಘೋರ ಅಸ್ತವ್ಯಸ್ತ ಧ್ವನಿಗಳು ಸಂಘರ್ಷ ನಡೆಸಲು ಪ್ರಾರಂಭಿಸುತ್ತವೆ, ವಿಸ್ತಾರಗೊಳ್ಳುವ, ಕಿರುದೆರೆಗಳನ್ನುಂಟು ಮಾಡುವ ಪ್ರಶಾಂತ ಸಮುದ್ರದ ಹಾಗಿರುವ ಶಾಂತಗಾಯನದಿಂದ ಪರವಶತೆಗೊಳಗಾಗಿ ಅಸ್ತವ್ಯಸ್ತ ಧ್ವನಿಗಳು ಕ್ರಮೇಣ ಕ್ಷೀಣಿಸುತ್ತವೆ ಮತ್ತು ನಾಶವಾಗುತ್ತವೆ.

ಒಮ್ಮೆಗೆ ವೈಭವಯುಕ್ತವಾದ, ಹೃತ್ಪೂರ್ವಕವಾದ ಧ್ವನಿಯೊಂದು ವಿಶಿಷ್ಟ ರೀತಿಯಲ್ಲಿ ಸ್ತೋತ್ರಪಾಠವನ್ನು ಹೇಳಿತು: “ಓ ಪ್ರಕಾಶವೆ, ಮಹೋನ್ನತ ಬುದ್ಧಿಮತ್ತೆಯೆ, ಜಗತ್ತಿನ ಉದ್ಧಾರಕನೆ ಗೋಚರಿಸು.”

ಸಂಗೀತದ ದೊಡ್ಡ ಅಲೆಗಳು, ಹೆಚ್ಚುತ್ತಿರುವ ಶಕ್ತಿಯೊಂದಿಗೆ ಹಾಗೂ ಆನಂದಪರವಶತೆಯೊಂದಿಗೆ ಅನುರಣಿಸುವ ತಮ್ಮ ಅದ್ಭುತ ತರಂಗಗಳಿಂದ ಗಾಜಿನ ಕಿಟಕಿಗಳನ್ನು ಅಲುಗಾಡಿಸುತ್ತ ಚರ್ಚಿನ ಕಟ್ಟಡವನ್ನು ತುಂಬಿಬಿಡುತ್ತವೆ. ಮತ್ತೊಮ್ಮೆ ಆ ಧ್ವನಿ ಕೇಳಿಬರುತ್ತದೆ: “ಪುನರ್ಜನ್ಮ ತಾಳಿದ ಮಾನವನೆ, ಎದ್ದೇಳು, ದೈವೀ ಬುದ್ಧಿವಂತಿಕೆಯನ್ನು ಪ್ರಕಟಿಸು, ವೈಭವದಿಂದ ಮಹೋನ್ನತ ಸನಾತನ ವಿವಾಹವನ್ನು ಆಚರಿಸು, ಪರಿಶುದ್ಧ ವಿಶ್ವಂಭರ ಪ್ರೇಮವನ್ನು ಪರಮೋಚ್ಚ ಸಾಮರಸ್ಯವನ್ನು ಪಸರಿಸು. ಓ ಭೌತಿಕ ರಾಜ್ಯದ ಸರ್ವಸಮರ್ಥ ಪ್ರಭುವೆ, ಸಮತೋಲನವನ್ನು ಸಿದ್ಧಿಸಿಕೊಳ್ಳುವವನೆ, ನಿನ್ನ ಬಲ ಹಾಗೂ ಜ್ಞಾನಗಳಲ್ಲಿ ಮೇಲಕ್ಕೇಳು. ದೇವ ಹಾಗೂ ಮಾನವನಾದವನೆ, ಅಮರ ಹಾಗೂ ವೈಭವಯುಕ್ತನಾದವನೆ, ನಿನಗೆ ಗೌರವ ಸಲ್ಲಲಿ!”



ವಿಜಯೋತ್ಸವದ ಸ್ತೋತ್ರಪಾಠದ ಕೊನೆಯ ಧ್ವನಿಗಳು ಮೈಮರೆತ ಪ್ರಶಂಸೆಯ ನಿಶ್ಚಲತೆಯಲ್ಲಿ ತಮ್ಮ ಥಳಥಳಿಸುವ ರಾಗಗಳನ್ನು ಹರಿದು ಹೋಗಲು ಬಿಟ್ಟುಕೊಟ್ಟವು. ಆಳವಾದ ಶಾಂತಿ ಜನಗಳ ಗುಂಪಿನ ಮೇಲೆ ಆವರಿಸುತ್ತದೆ. ಭವ್ಯ ಕಮಾನು ಚಾವಣಿಯನ್ನು ಪ್ರಕಾಶಮಯ ಪದ್ಮರಾಗದ ಮೇಲಂಗಿಯಲ್ಲಿ ಅಲಂಕರಿಸಲಾಗಿದೆ ಮತ್ತು ಅದರ ಕೆಳಗೆ ಹರಡಿಕೊಂಡಿರುವ ಜೀವಂತ ಮರಕತದ ಪರದೆ ಇದೆ: ಇಂದ್ರನೀಲ ವರ್ಣದ ತಾರೆಗಳು ಎಲ್ಲೆಡೆಯಲ್ಲಿ ಥಳಥಳಿಸುತ್ತಿವೆ ಮತ್ತು ಚಲಿಸುತ್ತಿವೆ, ಆರ್ಗನ್‌ದ ಹತ್ತಿರ ದೇವದೂತ(seraph)ನ ಬದಿಯಲ್ಲಿ ರೆಕ್ಕೆಗಳುಳ್ಳ ಮೂವತ್ತಾರು ಸತ್ತೆಗಳು ತಮ್ಮನ್ನಿರಿಸಿಕೊಂಡಿದ್ದಾರೆ, ಅವರು ಆ ಸುಂದರ ಕೂದಲಿನ ತರುಣಿಯನ್ನು ಆಚ್ಛಾದಿಸಿದ ಶ್ವೇತವರ್ಣದ ಉಜ್ವಲ ಪ್ರಭಾಮಂಡಲ(aura)ದ ಸುತ್ತ ಇಂದ್ರನೀಲ ವರ್ಣದ ವರ್ತುಲಾಕಾರದಲ್ಲಿ ನಿಂತಿದ್ದಾರೆ.

ನಿಧಾನವಾಗಿ ಮತ್ತು ಮೌನದಿಂದ ಜನಸಂದಣಿ, ಆಶ್ಚರ್ಯಚಕಿತರಾಗಿ, ಹೊರಗೆ ಹೊರಡುತ್ತಿದೆ; ರೋಗಿಷ್ಟರು ರೋಗಮುಕ್ತರಾಗಿದ್ದಾರೆ, ದುರ್ಬಲರು ಬಲ ದೊರಕಿಸಿದ್ದಾರೆ, ಬುದ್ಧಿವಂತರು ಜ್ಞಾನೋದಯ ಪಡೆದಿದ್ದಾರೆ. ಮತ್ತು ಜನರು ಹೊರಗೆ ಹೊರಡುತ್ತಿದ್ದಂತೆ ತಮ್ಮೊಡನೆ ತಮ್ಮ ನೆನಪುಗಳಲ್ಲಿ ಅಳಿಸಲಾಗದಂತೆ ಮುದ್ರಿತವಾದ ಸುವರ್ಣಾಕ್ಷರಗಳಲ್ಲಿ ಲಿಖಿತವಾದ ಮಹೋನ್ನತ ಶಾಸನವನ್ನು ಕೊಂಡೊಯ್ಯುತ್ತಿದ್ದಾರೆ.

*

## ದರ್ಶನ – 4

ಜನನಿಬಿಡ ನಗರವೊಂದರ ಮಧ್ಯದಲ್ಲಿದ್ದ, ಆಹ್ಲಾದಕರವಾಗಿ ದೀಪ ಬೆಳಗುತ್ತಿದ್ದ ಹಜಾರಿನಲ್ಲಿ ನಾನು ಎಚ್ಚತ್ತುಕೊಂಡೆ, ಅಲ್ಲಿ ಭೋಜನ ಸಮಾರಂಭ ನಡೆಯುತ್ತಿತ್ತು. ಸಾಕಷ್ಟು ಉದ್ದವಾಗಿದ್ದ, ವೈಭವಯುತವಾಗುವಂತೆ ಇರಿಸಿದ್ದ ಊಟದ ಮೇಜಿನ ಸುತ್ತ ಹನ್ನೆರಡು ಜನರು ತಮಾಷೆ ಮಾಡುತ್ತ ಕುಳಿತಿದ್ದಾರೆ. ಮಧ್ಯದಲ್ಲಿ ವೃದ್ಧನೊಬ್ಬನಿರುವುದನ್ನು ನಾನು ನೋಡುತ್ತೇನೆ, ಅವನ ಶಿರ ಗಾಂಭೀರ್ಯದಿಂದ ಕೂಡಿದೆ, ಸುಂದರವಾಗಿದೆ, ಅವನಿಗೆ ದೊಡ್ಡ ಗಡ್ಡವಿದೆ, ಮತ್ತು ರೇಶಿಮೆಯಂತಹ ಬಿಳಿ ಕೂದಲಿದೆ, ಅವನ ಮುಖಭಾವ ಏಕಕಾಲಕ್ಕೆ ಬಹಳ ಗಂಭೀರ ಹಾಗೂ ಮೃದುವಾಗಿದೆ ಮತ್ತು ಅವನ ಉಲ್ಲಾಸಕ್ಕೂ ಕೂಡ ಗಾಂಭೀರ್ಯದ ಸ್ಪರ್ಶವಿದೆ, ಅವನ ಬದಿಯಲ್ಲಿ ಸುಂದರ ಕೂದಲಿನ ಚಿಕ್ಕ

ವಯಸ್ಸಿನ ಮಹಿಳೆಯೊಬ್ಬಳು ಕುಳಿತಿದ್ದಾಳೆ, ಉಳಿದ ಹತ್ತು ಜನರು ಪುರುಷರು, ಅವರು ತಮ್ಮ ಗುರುವಿನ ಸುತ್ತ ಒಟ್ಟುಗೂಡಿದ್ದಾರೆ.

ಭೋಜನ ಸಂತೋಷಕರವಾಗಿ ನಡೆಯುತ್ತಿದ್ದಾಗ, ಆ ನಗರದ ಮೇಲೆ ಭಾರವಾದ ಮೋಡವೊಂದು ದ್ವೇಷವನ್ನು ಸಂಗ್ರಹಿಸಿಟ್ಟುಕೊಂಡು ಒಟ್ಟು-ಗೂಡುತ್ತಿರುವುದರ ಭಾವನೆ ನನಗೆ ಬಂದಿತು.

ಆ ತರುಣಿಯೂ ಕೂಡ ಬರಲಿರುವ ಅಪಾಯ ಕುರಿತು ಭಾವನೆ ತಂದುಕೊಂಡಳು. ಕೂಡಲೆ ಅವಳು ಮೇಲಕ್ಕೆದ್ದು ಸ್ಫೂರ್ತಿಗೊಂಡ ಧ್ವನಿಯಲ್ಲಿ ಹೇಳುತ್ತಾಳೆ: "ಭವ್ಯ ಆಪತ್ತೊಂದು ನಮ್ಮನ್ನು ಆವರಿಸುತ್ತಿದೆ, ಭಯಾನಕ ವಿಪ್ಲವ (cataclysm) ತಯಾರಿಯಲ್ಲಿದೆ. ನನಗೆ ಅದರ ಭಾವನೆ ಬರುತ್ತಿದೆ, ಆದಾಗ್ಯೂ ಅದು ನಿಖರವಾಗಿ ಏನಿದೆ ಎಂಬುದು ನನಗೆ ತಿಳಿಯದು, ಎಷ್ಟೇ ಬೆಲೆ ತೆತ್ತಾದರೂ ನಾವು ಈ ನಗರ ತ್ಯಜಿಸಿ, ನಮ್ಮನ್ನು ನಂಬುವವರ ಜೊತೆಗೆ, ಅನುಸರಿಸಲು ಇಷ್ಟಪಡುವವರ ಜೊತೆಗೆ ಕೂಡಲೆ ಹೊರಟು ಹೋಗಬೇಕು. ಸಾಮರಸ್ಯದಲ್ಲಿದ್ದ ಆ ಕೂಟದಲ್ಲಿ ಉಪಸ್ಥಿತರಿದ್ದ ಯಾರೂ ಆ ಗಂಭೀರ ನುಡಿಗಳ ಬಗ್ಗೆ ಸಂಶಯ ಪಡುವುದಿಲ್ಲ. ಎಲ್ಲರೂ ಹಿಂದು ಮುಂದು ನೋಡದೆ ಏಳುತ್ತಾರೆ ಮತ್ತು ಹಜಾರವನ್ನು ಬಿಟ್ಟು ತೆರಳಲು ತಯಾರಿ ಮಾಡಿಕೊಳ್ಳುತ್ತಾರೆ.

ಆ ಕ್ಷಣದಲ್ಲಿ ಆ ದೃಶ್ಯ ನನ್ನ ದೃಷ್ಟಿಯಿಂದ ಮಸುಕಾಗಿ ಹೋಗುತ್ತದೆ ಮತ್ತು ಕೆಲ ಸಮಯದವರೆಗೆ ನನಗೆ ಏನನ್ನೂ ಗುರುತಿಸಲಾಗುವುದಿಲ್ಲ. ನನ್ನ ಪ್ರಜ್ಞೆ ಮರಳಿ ಬಂದನಂತರ ಆ ಚಿಕ್ಕ ಗುಂಪನ್ನು ಮತ್ತೆ ಕಂಡುಕೊಳ್ಳುತ್ತೇನೆ, ಆದರೆ ದೃಶ್ಯ ಎಷ್ಟೊಂದು ಬದಲಾಗಿದೆ!

ಆ ಹನ್ನೆರಡು ಜನರು ನಗರವನ್ನು ಬಿಟ್ಟು ಹೋಗಿದ್ದಾರೆ. ಈಗ ಆ ನಗರ ಕೇವಲ ಹಾಳುಬಿದ್ದಿದೆ, ನಾಶವಾಗಿದೆ. ವಿಪ್ಲವ ಎಷ್ಟೊಂದು ಭೀಕರವಾಗಿರಬಹುದು! ಕಲ್ಲು, ಇಟ್ಟಂಗಿ ಮೊದಲಾದವುಗಳ ಒಡ್ಡೊಡ್ಡ ಹೆಂಟೆಗಳು (ಅವಶೇಷಗಳು) ಇತ್ಯಾದಿಗಳ ಗುಡ್ಡೆಗಳ ಹೊರತಾಗಿ ಈ ಭವ್ಯ ನಗರದ ಯಾವುದೂ ಉಳಿದುಕೊಂಡಿಲ್ಲ, ಅದು ಬೆಂಕಿಯಿಂದ ಅಷ್ಟೊಂದು ಆಹುತಿಗೊಳಗಾಗಿದೆ, ನೀರಿನಿಂದ ಸವೆದು ಹೋಗಿದೆ. ಭೂಕಂಪ, ಜ್ವಾಲಾಮುಖಿ ಸ್ಫೋಟ, ಜಲ ಪ್ರಳಯ ಇವು ಮೂರೂ ಎಷ್ಟೊಂದು ಶ್ರಮದಿಂದ ತಯಾರಿಸಿದ ವಿಜ್ಞಾನದ ಹಾಗೂ ಕುಶಲಕಲೆಯ ಉತ್ಪಾದನೆಗಳನ್ನು ಒಮ್ಮಿಂದೊಮ್ಮಿಗೆ ಮಸುಕಾದ ಇಲ್ಲವೆ ಕೆಂಪು



ಕಲ್ಲಿನ ದಿಬ್ಬಗಳನ್ನಾಗಿ, ಗುಡ್ಡಗಳನ್ನಾಗಿ, ಹೊಗೆಯಿಂದ ಕಪ್ಪಾದವುಗಳನ್ನಾಗಿ ಬದಲಿಸಲು ನೆರವಾಗಿರಬೇಕು. ಹುಲ್ಲಿನ ಒಂದು ಗರಿಕೆ ಕೂಡ ನೋಡಲು ಕಂಡುಬರುತ್ತಿಲ್ಲ. ಈ ವಿಶಾಲ ಹಾಳು ಭೂಮಿಯ ನಡುವೆ ಕಾಡು, ರಭಸದ ಜಲಪ್ರವಾಹ ಎಲ್ಲ ಬಗೆಯ ಭಗ್ನಾವಶೇಷವನ್ನು ಗುಡಿಸಿಕೊಂಡು ತೀವ್ರಗತಿಯಲ್ಲಿ ಓಡುತ್ತಿದೆ. ಕಳವಳವನ್ನುಂಟು ಮಾಡುವ ಈ ದೃಶ್ಯದ ಮೇಲೆ ಮೋಡಗಳಿಲ್ಲದ, ನಿರ್ಮಲ ನೀಲಿ ಆಕಾಶದ ವಿಸ್ತಾರ ಚಾಚಿಕೊಂಡಿದೆ ಮತ್ತು ಅದು ಹತಭಾಗ್ಯ ಪೃಥ್ವಿಯನ್ನು ಅಣಕಿಸುವಂತಿದೆ.

ಪ್ರಕ್ಷುಬ್ಧ ನೀರಿನ ಬದಿಯಲ್ಲಿರುವ ಬಂಜರು ದಂಡೆಗಳಗುಂಟ ಸಾವಿರಾರು ಜನರು ಬೀಡು ಬಿಟ್ಟಿದ್ದಾರೆ, ಅವರು ಪಟ್ಟಣದಿಂದ ಈ ಎಲ್ಲ ಅಂಶಗಳ ರೋಷಾವೇಶದಿಂದ ಹೊರದೂಡಲ್ಪಟ್ಟವರಾಗಿ ಬಂದಿದ್ದಾರೆ. ಅವರು ಉತ್ಸಾಹಶೂನ್ಯ ನಿರಾಶೆಯಲ್ಲಿ ಮುಳುಗಿ ಹೋಗಿದ್ದಾರೆ, ಆಲಸ್ಯದಿಂದ ಕೈಗಳನ್ನು ಚಾಚಿಕೊಂಡು, ಶೂನ್ಯ ದೃಷ್ಟಿಯೊಂದಿಗೆ ಕುಳಿತಿದ್ದಾರೆ, ಇಲ್ಲವೆ ಅಂಗಾಂಗಗಳ ಸೆಳೆವಿನಿಂದ ಹಿಂದೆ ಮುಂದೆ ಹೆಜ್ಜೆ ಇಡುತ್ತಿದ್ದಾರೆ, ಆ ಆಘಾತ ಅವರಿಗೆ ಬಹಳ ಭವ್ಯರೂಪದ್ದಾಗಿತ್ತು ಮತ್ತು ಅವರನ್ನು ವಿವೇಕಶೂನ್ಯರನ್ನಾಗಿ ಮಾಡಿತ್ತು.

ತದ್ವಿರುದ್ಧವಾಗಿ ಆ ಹನ್ನೆರಡು ಜನರ ಚಿಕ್ಕ ಗುಂಪು ಶಾಂತ ರೀತಿಯಲ್ಲಿದ್ದಾರೆ, ಧೈರ್ಯದಿಂದಿದ್ದಾರೆ, ಗುರು ಆ ಪ್ರವಾಹದಗುಂಟ ನಡೆಯುತ್ತಿದ್ದಾನೆ, ರಕ್ಷಣೆ ನೀಡುವ ಅವನ ತೋಳು ಆ ತರುಣಿಯ ಸುತ್ತಲೂ ಇದೆ, ಅವನಲ್ಲಿ ವಿಶ್ವಾಸ-ವನ್ನಿರಿಸಿಕೊಂಡ ಅನುಯಾಯಿಗಳು ಅವನ ಸುತ್ತ ಇದ್ದಾರೆ. ದಿಗ್ಭ್ರಮೆಗೊಳಗಾದ ಜನರ ಗುಂಪನ್ನು ನೋಡಿ ಅವರಿಗೆ ಮರುಕವುಂಟಾಗುತ್ತದೆ, ಆ ಗುಂಪಿಗೆ ಸಹಾಯ ಮಾಡಲು ತಮಗೆ ಸಾಧ್ಯವಾಗದೆ ಇರುವುದನ್ನು ಕಂಡ ಅವರಿಗೆ ದುಃಖವಾಗುತ್ತದೆ. ಆ ಸ್ಥಳವನ್ನು ಸಾಧ್ಯವಾದಷ್ಟು ಬೇಗ ತ್ಯಜಿಸಿ ಅಲ್ಲಿಂದ ಬೇರೆಡೆ ತೀವ್ರಗತಿಯಿಂದ ಹೊರಟು ಹೋಗಬೇಕು ಎಂಬುದು ಆ ವೃದ್ಧನಿಗೆ ತಿಳಿದಿದೆ, ಏಕೆಂದರೆ ಅಪಾಯ ಇನ್ನೂ ಬೆದರಿಕೆ ಹುಟ್ಟಿಸುತ್ತಿದೆ, ಭೂಮಿಯ ಚಿಪ್ಪಿನ ಭಾಗ ಮೇಲೆದ್ದು ಬರುವಂತಹ ಘಟನೆಗಳು ಹೊಸದಾಗಿ ಸಂಭವಿಸುವ ಸಾಧ್ಯತೆ ಇದೆ ಮತ್ತು ಬಹುಶಃ ಎಲ್ಲವೂ ಜಲಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಬಹುದು. ಅದನ್ನು ಕಂಡುಕೊಂಡ ಆ ವೃದ್ಧ ಮನುಷ್ಯ ಅಲ್ಲಿದ್ದ ಜನರ ಗುಂಪಿನತ್ತ ಹೋಗಿ ಸ್ಪಷ್ಟ ಹಾಗೂ ಗಟ್ಟಿ ಧ್ವನಿಯಲ್ಲಿ ಹೇಳುತ್ತಾನೆ: ನೆಲದ ಮೇಲೆ ಚೆಲ್ಲಿಕೊಂಡಿದ್ದ ತೇಲುವಂತಹ ಕಟ್ಟಿಗೆಯನ್ನು ಉಪಯೋಗಿಸಿ ತೆಪ್ಪವನ್ನು ನಿರ್ಮಿಸಬೇಕು, ಸದ್ಯ

ಸಂಭವಿಸಬಹುದಾದ ವಿನಾಶದಿಂದ ಪಾರಾಗಲು ಇಲ್ಲಿಂದ ಆ ತೆಪ್ಪದ ಮೂಲಕ ಪಲಾಯನ ಮಾಡಬೇಕು. ನಂತರ ಅವರಿಗೆ ಕೊನೆಯ ವಿದಾಯ ಹೇಳಿ ಆ ಚಿಕ್ಕ ಗುಂಪು ತಮಗಾಗಿ ಕಾದುಕೊಂಡಿದ್ದ, ಕಲ್ಲು ಬಂಡೆಯೊಂದಕ್ಕೆ ಕಟ್ಟಿಹಾಕಿದ ತೇಲುವ ಮನೆಯತ್ತ ಸಾಗುತ್ತದೆ. ಆ ಹನ್ನೆರಡು ಜನರು ತಾತ್ಕಾಲಿಕ ವ್ಯವಸ್ಥೆಯಂತಿರುವ ನೌಕೆ(ತೇಲುವ ಮನೆ)ಯಲ್ಲಿ ಪ್ರವೇಶಿಸುತ್ತಾರೆ, ಅವರಲ್ಲಿ ಒಬ್ಬ ಕೋಲಿನಿಂದ ಹುಟ್ಟುಹಾಕುತ್ತಾನೆ, ಪ್ರವಾಹದಲ್ಲಿ ತೇಲಲು ಬಿಟ್ಟ ಆ ನೌಕೆ ವಿಪರೀತ ವೇಗದಿಂದ ಅದರ ಮಾರ್ಗದಲ್ಲಿರುವ ಕಲ್ಲು ಬಂಡೆಗಳು, ತೇಲುವಂತಹ ಚೂರುಪಾರು ವಸ್ತುಗಳು ಇವುಗಳ ನಡುವೆ ಸಾಗುತ್ತದೆ.

ತಲೆ ಸುತ್ತಿ ಬರುವಷ್ಟು ವೇಗದಿಂದ ಅವಸರದಲ್ಲಿ ಅವರು ಮುಂದೆ ಸಾಗುತ್ತಾರೆ, ಬಿಳಿಯ ಉಡುಪು ಧರಿಸಿದ್ದ ಆ ತರುಣಿ ನೌಕೆಯ ಅಗಲವಾಗಿ ತೆರೆದುಕೊಂಡಿದ್ದ ಬದಿಯಲ್ಲಿ ನಿಂತು ಆ ದೃಶ್ಯವನ್ನು ನೆಟ್ಟದೃಷ್ಟಿಯಿಂದ ನೋಡುತ್ತಾಳೆ ಮತ್ತು ಕಾವಲಿರಿಸಿದ್ದಾಳೆ. ತರುಣ ಮನುಷ್ಯನೊಬ್ಬ: "ಸಮುದ್ರವನ್ನು ನಾವು ತಲುಪಬಲ್ಲೆವಾದರೆ ಎಲ್ಲವೂ ಒಳ್ಳೆಯದಾಗುವುದು" ಎಂದು ಹೇಳುತ್ತಾನೆ.

ಇನ್ನೊಬ್ಬ ಉತ್ತರ ಕೊಡುತ್ತಾನೆ: "ಅದು ಕಠಿಣವಾದದ್ದು, ಏಕೆಂದರೆ ಸಮುದ್ರದ ಹತ್ತಿರ ಹಾಯಿಪಟ್ಟಿ(reef)ಯಿದೆ ಮತ್ತು ನಾವು ಬಂಡೆಗಲ್ಲುಗಳಿಗೆ ಢಿಕ್ಕಿ ಹೊಡೆದು ಚೂರು ಚೂರಾಗಬಹುದು." ಆಗ ಗುರುವಿನ ಧ್ವನಿ ಆಳದಿಂದ, ಗಾಂಭೀರ್ಯದೊಂದಿಗೆ ಮೇಲೆದ್ದು ಬರುತ್ತದೆ: "ನಮ್ಮ ನಿವಾಸ ಸ್ಥಾನ ಎಂದಿಗೂ ಮುಳುಗಲಾರದು ಎಂಬುದನ್ನು ನೀವು ಪೂರ್ತಿ ಅರಿತಿದ್ದೀರಿ, ಅದು ಸನಾತನ ಸತ್ಯದ ಸಂಕೇತ ಆಗಿಲ್ಲವೆ?" ಹಲವಾರು ಜನರು, ಎದ್ದು ನಿಂತಿರುವ ತರುಣಿಯತ್ತ ಬೆರಳು ಮಾಡಿ ತೋರಿಸಿ ಏಕಕಂಠದಿಂದ "ಅಲ್ಲದೆ ಅವಳು ನಮ್ಮ ಮಧ್ಯದಲ್ಲಿ ಇಲ್ಲಿರುವವರೆಗೆ ನಮಗೆ ಯಾವ ಕೆಡಕೂ ಉಂಟಾಗದು" ಎಂದು ಉತ್ತರ ನೀಡುತ್ತಾರೆ. ಅವಳು ಇನ್ನೂ ಹೆಚ್ಚು ಗಾಢವಾಗಿ ಎಚ್ಚರದಿಂದ ಗಮನ ಹರಿಸುತ್ತಾಳೆ. ಬಹಳ ದೂರ ಸಾಗಿ ಹೋದ ನಂತರ ಒಮ್ಮೆಗೆ ಆ ತೇಲುತ್ತಿರುವ ಮನೆ ಒಂದು ಕಾಲದಲ್ಲಿ ಬಹಳ ಭವ್ಯವಾಗಿದ್ದ ಹಾಗೂ ಸುಂದರವಾಗಿದ್ದ ನಗರವಿರುವಲ್ಲಿಗೆ ಬರುತ್ತದೆ. ಕೇವಲ ಗೋಡೆಗಳ ದೊಡ್ಡ ತುಂಡುಗಳು, ಚರ್ಚಿನ ನೆತ್ತಿಯ ಮೇಲಿನ ಕಟ್ಟಡಗಳು, ಶಿಖರಗಳು, ಅರಮನೆಗಳು ಇವೆಲ್ಲವುಗಳ ಭಗ್ನಾವಶೇಷಗಳು ಗಾಳಿ, ನೀರು ಹಾಗೂ ಬೆಂಕಿಗಳ ಹೊಡೆತದಿಂದ ಉಂಟಾದವುಗಳಾಗಿ ಗೋಚರವಾಗುತ್ತಿವೆ, ಅವುಗಳ ನಿಗೂಢ ಬಿಳಿ ಬಣ್ಣದ ಆಕಾರಗಳು ಆಕಾಶದತ್ತ



ಮುಖಮಾಡಿವೆ. ನೆಲ ಹರಿಯುವ ನೀರಿನಿಂದ ಮುಚ್ಚಿಹೋಗಿದೆ ಮತ್ತು ಒಮ್ಮೆ ನದೀತಟಾಕವಾಗಿದ್ದ ಇಲ್ಲವೆ ಬಂದರಾಗಿದ್ದ ನಗರದ ಮಧ್ಯಭಾಗದಲ್ಲಿ ಬಿಚ್ಚಿ ಹಾಕಿದ ಹಡಗಿನ ಒಡಲು ಉಳಿದುಕೊಂಡಿದೆ.

ಆ ದೃಶ್ಯ ಎಷ್ಟೊಂದು ಪ್ರಭಾವಶಾಲಿಯಾಗಿದೆಯೆಂದರೆ ಅದು ಸ್ಪಷ್ಟವಾಗಿ ಶ್ರೇಷ್ಠ ನಾಗರಿಕತೆಯೊಂದು ವಿನಾಶಕ್ಕೊಳಗಾದುದರ ಕಲ್ಪನೆಯನ್ನು ಮನಸ್ಸಿಗೆ ತಂದು–ಕೊಡುತ್ತದೆ, ಅದನ್ನು ಅವರೆಲ್ಲರೂ ಮೌನದಿಂದ, ಗಂಭೀರ ದುಃಖಪೂರ್ಣ ಚಿಂತನೆಯಿಂದ ದೃಷ್ಟಿಸಿ ನೋಡುತ್ತಾರೆ.

ಆ ಕ್ಷಣದಲ್ಲಿ ಮತ್ತೊಮ್ಮೆ ಎಲ್ಲವೂ ನನ್ನ ದೃಷ್ಟಿಯಿಂದ ಮಸುಕಾಗಿ ಹೊಗುತ್ತದೆ ಮತ್ತು ನನಗೆ ಪ್ರಜ್ಞೆ ಮರಳಿ ಬಂದಾಗ ನಾನು ಸಮುದ್ರದ ಮೇಲಿರುವುದನ್ನು ಕಂಡುಕೊಳ್ಳುತ್ತೇನೆ. ಅದು ಸದ್ದುಗದ್ದಲವಿರುವ ಹೆದ್ದೆರೆಗಳಿಂದ ಉಬ್ಬಿಕೊಂಡ ಕಾಡು ಸಮುದ್ರ, ಅದು ತನ್ನ ಬಳಿ ಬರುವ ದುಡುಕುತನ ತೋರಿಸುವ ಎಲ್ಲವನ್ನೂ ನುಂಗಿಹಾಕಲು ತಯಾರಾಗಿದೆ. ಈ ಅಲೆಗಳ ಮಧ್ಯೆ ಅವ್ಯವಸ್ಥೆಯಿಂದ ಕೂಡಿದ, ಭೀಕರ ಹಾಗೂ ಮುಖ ಸೊಟ್ಟಗೆ ಮಾಡಿಕೊಂಡಿರುವ ಸತ್ತೆಗಳನ್ನು ನೋಡುತ್ತೇನೆ. ಅವು ತಮ್ಮದೇ ಸಾಮರ್ಥ್ಯದಿಂದ ಕ್ರೋಧಾವೇಶಕ್ಕೊಳಗಾಗಿರುವ ಜಲಪ್ರವಾಹಗಳ ಸಾಮರ್ಥ್ಯವನ್ನು ಹೆಚ್ಚಿಸುತ್ತಿದ್ದಾರೆ. ನಾನು ಹೆಚ್ಚು ಹತ್ತಿರದಿಂದ ನೋಡಿದಾಗ ಆ ಸತ್ತೆಗಳ ಉನ್ಮಾದ ಕಡುಗೆಂಪು ಬಣ್ಣದ ಆಕಾರಗಳನ್ನು ಹಿಡಿದಿಟ್ಟುಕೊಳ್ಳುವುದನ್ನು ಗುರಿಯಾಗಿರಿಸಿಕೊಂಡಿದೆ ಎಂಬುದನ್ನು ನೋಡುತ್ತೇನೆ, ಆದರೆ ಆ ಆಕಾರಗಳು ತಮ್ಮ ಸ್ಥಿರತೆಯಿಂದ ವಿರೋಧಿಸುತ್ತಿವೆ, ಆದಾಗ್ಯೂ ಸ್ವಲ್ಪ ಸಮಯದಲ್ಲಿ ಆ ಸತ್ತೆಗಳ ಬಲ ನಿಶ್ಶೇಷವಾಗುವುದು.

ನಂತರ ದೂರದಲ್ಲಿ ಆ ತೇಲುತ್ತಿರುವ ಮನೆ ಕಾಣಿಸಿತು, ಅದು ನೊರೆ ತುಂಬಿದ ಸಮುದ್ರದ ಎದುರಿಗೆ ನೇರಳೆ ಬಣ್ಣದಲ್ಲಿ ಪಕ್ಕನೋಟದ ಆಕಾರವನ್ನು ಬರೆಯುತ್ತಿರುವ ಹಾಗಿದೆ. ಅದು ಪರಿಪೂರ್ಣವಾಗಿ ನುಣುಪಾದ ಮಾರ್ಗದಲ್ಲಿ ಸಾಗಿಹೋಗುವ ರೀತಿಯಲ್ಲಿ ಜಲಪ್ರವಾಹಗಳ ಮೇಲೆ ನೇರವಾಗಿ ಏರುಪೇರಿಲ್ಲದ ದಿಶೆಯಲ್ಲಿ ಜಾರಿ ಹೋಗುತ್ತಿದೆ ಮತ್ತು ನಿಜವಾಗಿ ಆ ನೌಕೆಯ ಹಿಂದಕ್ಕೂ ಮುಂದಕ್ಕೂ, ಅದು ಸಮೀಪಿಸುತ್ತಿದ್ದಂತೆ ಒಮ್ಮೆಗೆ ಶಾಂತವಾಗುವ ಅಲೆಗಳ ಮಧ್ಯೆ ಪ್ರಕಾಶಮಯವಾದ ಹಾಗೂ ನುಣುಪಾದ ದೀರ್ಘ ರಜತ ವರ್ಣದ ಮಾರ್ಗ ತೆರೆದುಕೊಳ್ಳುತ್ತದೆ. ಮಾರ್ಗದ ಎರಡೂ ಬದಿಗಳಲ್ಲಿ ಅಲೆಗಳು ಲಂಬವಾಗಿರುವ ಗೋಡೆಗಳ ಆಕಾರದಲ್ಲಿ ಮೇಲಕ್ಕೇಳುತ್ತವೆ, ಆದರೆ ಸಾಮರ್ಥ್ಯಪೂರ್ಣ

ಶಕ್ತಿಯೊಂದು ಆ ಅಲೆಗಳು ಚಿಕ್ಕ ಗುಂಪಿನ ಆಶ್ರಯ ಸ್ಥಾನದ ಮೇಲೆ ಬೀಳದಂತೆ ತಡೆಹಿಡಿಯುತ್ತದೆ. ಮತ್ತು ಈಗ ಕಡುಗೆಂಪು ಬಣ್ಣದ ಆಕಾರಗಳು ಒಂದರ ನಂತರ ಒಂದರಂತೆ, ಶತ್ರುಗಳ ಭೀಕರ ಪ್ರಯತ್ನವನ್ನು ಪ್ರತಿಭಟಿಸುತ್ತ, ನೀರಿನಿಂದ ಹೊರಗೆ ಬರುತ್ತವೆ ಮತ್ತು ತೇಲುತ್ತಿರುವ ಮನೆಯಲ್ಲಿ ಆಶ್ರಯ ಪಡೆಯುತ್ತವೆ. ಅವರೆಲ್ಲರೂ ಸುರಕ್ಷಿತರಾದ ಕೂಡಲೆ, ಅವರನ್ನು ವ್ಯರ್ಥವಾಗಿ ವಿರೋಧಿಸುವ ಶತ್ರು ಸತ್ತೆಗಳನ್ನು ಚೂರು ಚೂರು ಮಾಡುತ್ತ, ನುಂಗಿಬಿಡುತ್ತ ಅಲ್ಲಿದ್ದ ಭವ್ಯ ಅಲೆಗಳು ತಮ್ಮ ಮೇಲೆಯೇ ಹಿಂದೆ ಬಿದ್ದುಬಿಡುತ್ತವೆ.

ಕ್ರಮೇಣ ಎಲ್ಲವೂ ಶಾಂತವಾಗುತ್ತದೆ, ನೀರು ಅಪರೂಪಕ್ಕೆ ಕಿರುದೆರೆಗಳನ್ನೆಬ್ಬಿಸುತ್ತ ಇಂದ್ರನೀಲಿ ಬಣ್ಣದ್ದಾಗುತ್ತದೆ, ಆಕಾಶ ಸೂರ್ಯ ಪ್ರಕಾಶದಿಂದ ಉಜ್ವಲವಾಗಿ ಹೊಳೆಯುತ್ತದೆ, ನೌಕೆ ಬಿಳಿ ಬಣ್ಣದ ಪ್ರಭಾವಲಯದೊಂದಿಗೆ ತನ್ನ ಮಾರ್ಗ ಹಿಡಿದು ಮುಂದುವರಿಯುತ್ತದೆ.

ನೌಕೆಯೊಳಗಿದ್ದ ಎಲ್ಲರೂ ಆನಂದಿಸುತ್ತಿದ್ದಾರೆ. ಆ ಚಿಕ್ಕ ಗುಂಪು ರಕ್ಷಿಸಿದ ಎಲ್ಲರಿಗೂ ಪ್ರೀತಿಪೂರ್ವಕ ಸ್ವಾಗತವಿದೆ ಮತ್ತು ಗುರು ಆಳವಾದ ಹಾಗೂ ಮೃದುವಾದ ಧ್ವನಿಯಲ್ಲಿ ಹೇಳುತ್ತಾನೆ: “ಹೀಗೆ ಕೂಡಲೆ ಇಲ್ಲವೆ ನಂತರ ಅಂಧಕಾರದ ಮೇಲೆ ಪ್ರಕಾಶ ಜಯ ಸಾಧಿಸುತ್ತದೆ, ಸುವ್ಯವಸ್ಥೆ ಅವ್ಯವಸ್ಥೆಯ ಮೇಲೆ, ಪ್ರೇಮ ದ್ವೇಷದ ಮೇಲೆ ಜಯ ಸಾಧಿಸುತ್ತವೆ ಮತ್ತು ಶಾಂತಿಯಲ್ಲಿರುವ ವಿಶ್ವದ ಮೇಲೆ ಸಾಮರಸ್ಯ ಆಳಿಕೆ ನಡೆಸುತ್ತದೆ.”

*

## ದರ್ಶನ – 5

ನಾನು ನಿದ್ರಿಸಿದ್ದೆ, ಈಗ ಎಚ್ಚತ್ತಿದ್ದೇನೆ.

ಬಹಳ ಹಿಂದಿನ ಕಾಲದಲ್ಲಿದ್ದ, ಇಂದ್ರನೀಲ ಮಣಿಯ ಗಾಢ ಬಣ್ಣವಿರುವ ನೀರಿದ್ದ, ಕನ್ನಡಿಯಂತೆ ಶಾಂತವಾಗಿರುವ ಕೆರೆಯ ಬಳಿ ಎಚ್ಚತ್ತುಗೊಂಡೆ.

ಆ ಕೆರೆಯ ಪೂರ್ವ ದಿಕ್ಕಿನಲ್ಲಿ ಅಪರೂಪ ವರ್ಗದ ಗಿಡಗಂಟಿಗಳಿರುವ ಮಹೋನ್ನತ ತೋಪನ್ನು ನೋಡುತ್ತೇನೆ, ಅವುಗಳ ಉದ್ದ, ಹೊರಗೆ ವಕ್ರವಾಗಿ ಬಾಗಿಕೊಂಡ ಟೊಂಗೆಗಳು ನಿಶ್ಚಲ, ನಿರ್ಮಲ ಜಲದ ಮೇಲೆ ಆಟವಾಡುತ್ತಿವೆ, ಆ ಗಿಡಗಳ ಉಜ್ವಲ ವರ್ಣದ ಪುಷ್ಪಗಳ ಪ್ರತಿಬಿಂಬ ನೀರಿನಲ್ಲಿ ಕಾಣುತ್ತದೆ, ಆ



ಪುಷ್ಪಗಳು ವೈವಿಧ್ಯಮಯ ಬಣ್ಣಗಳಿಂದ ಕೂಡಿವೆ, ಸಮೃದ್ಧವಾಗಿವೆ. ಈ ಮೋಹಕವಾದ ಸ್ವಾಭಾವಿಕ ಆಶ್ರಯ ಸ್ಥಾನದಲ್ಲಿ ಭವ್ಯ, ಬಿಳಿ ಬಣ್ಣದ ಕಮಲಗಳು ಅರಳಿಕೊಳ್ಳುತ್ತವೆ.

ಆ ಇಡೀ ಆಶ್ರಯ ಸ್ಥಾನ ಕಾಮನ ಬಿಲ್ಲಿನ ಬಣ್ಣಗಳಿಂದ ತೇಜಃಪೂರ್ಣ–ವಾಗಿದೆ ಮತ್ತು ಆ ತೇಜಸ್ಸಿನ ಕೇಂದ್ರ ಒಬ್ಬ ಸುಂದರ ಕೂದಲಿನ ತರುಣ ವಯಸ್ಸಿನ ಮಧ್ಯವರ್ತಿಯಾಗಿದ್ದಾಳೆ[1], ತನ್ನ ಲಲಿತವಾದ ಸೌಂದರ್ಯದಿಂದ ನಿದ್ರೆ ಮಾಡುತ್ತಿದ್ದಾಳೆ, ವಿಸ್ತಾರವಾಗಿ ಹರಡಿಕೊಂಡ ಎಲೆಗಳ ಮೇಲೆ ಒರಗಿಕೊಂಡಿದ್ದಾಳೆ. ಅವಳು ಉಟ್ಟುಕೊಂಡಿದ್ದ ಯಥೇಷ್ಟ ಉಡುಪಿಗೆ ಬಂಗಾರದ ನಡುಪಟ್ಟಿ ಇದೆ. ಆಕೆಯ ಎಡಭಾಗದಲ್ಲಿ ಜಾಗರೂಕ ಕಾವಲುಗಾರನ ಹಾಗೆ ಬಾಗುಕೊಕ್ಕಿನ ಬೆಳ್ಳಕ್ಕಿ ಸ್ವ–ಪ್ರತಿಷ್ಠೆಯಿಂದ ನೆಟ್ಟಗೆ ನಿಂತುಕೊಂಡಿದೆ. ನಿದ್ರೆ ಮಾಡುತ್ತಿರುವವಳ ಮೇಲೆ ರಕ್ಷಣೆ ನೀಡುವ ಕೆನ್ನೀರಿಳೆ ಬಣ್ಣದ ರತ್ನದಂತಿರುವ ಹೊದಿಕೆ ತೂಗುತ್ತಿದೆ. ಆ ಮಧ್ಯವರ್ತಿ ತರುಣಿ ಮಂತ್ರಮುಗ್ಧವಾಗಿಸುವ ಕನಸಿನಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಳೆ. ಮಧುರವಾದ ತಾಜಾ ಮೆಲುಗಾಳಿ ಎಲೆಗಳನ್ನು ಚೆದರಿಸುತ್ತದೆ, ನೀರಿನಿಂದ ಮರ್ಮರ ಶಬ್ದ ಬರುವಂತೆ ಮಾಡುತ್ತದೆ, ತನ್ನ ಮುದ್ದುಮಾಡುವ ಉಸಿರಿನಿಂದ “ಆಳವಾದ ನೀರಿನ ದ್ವೀಪದ ರಾಣಿಯೆ” ಎನ್ನುತ್ತ ಕಲರವ ಧ್ವನಿ ಮಾಡುತ್ತಿರುವಂತಿದೆ. ಆಳಸಿಕ್ಕದ ನೇರಳೆ ಬಣ್ಣದ ನೀರಿನ ಸಂಗ್ರಹದಿಂದ “ಆಳವಾದ ನೀರಿನ ದ್ವೀಪದ ರಾಣಿಯೆ” ಎಂಬ ಇಂಪಾದ ಧ್ವನಿ ಪ್ರತಿಧ್ವನಿಯ ರೂಪದಲ್ಲಿ ಮೇಲೆದ್ದು ಬರುತ್ತದೆ.

ನಂತರ ನನಗೆ ನಿದ್ರೆ ಬಂದಿತು ಮತ್ತು ಅರಮನೆಯೊಂದರ ವಿಶಾಲ ಹಜಾರಿನಲ್ಲಿ ಎಚ್ಚರವಾಯಿತು. ಅಲ್ಲಿಯ ಕಂಬಗಳ ಆಕಾರ ಹಾಗೂ ಅಲಂಕಾರ, ವಿಪುಲತೆಯಿದ್ದರೂ ಸಂಯಮದಿಂದ ಗೋಡೆಗಳನ್ನು ಅಲಂಕರಿಸುವ ವರ್ಣಚಿತ್ರಗಳು ಇವೆಲ್ಲವುಗಳಿಂದ ನಾನು ಇಜಿಪ್ತ ದೇಶದ ಮೆಂಫಿಸ್ (Memphis) ಇಲ್ಲವೆ ಥೆಬೆಸ್ (Thebes) ನಗರಗಳಲ್ಲಿ ಪ್ರಾಚೀನ ಕಾಲದಲ್ಲಿದ್ದ ಅರಮನೆಗಳಲ್ಲೊಂದರಲ್ಲಿ ಇರುವೆನೆಂಬ ಭಾವನೆ ತಂದುಕೊಂಡೆ.

ಹಜಾರ ಚೈತ್ಯೋಪಮವಾದ ಜನಸಂದಣಿಯಿಂದ ತುಂಬಿಕೊಂಡಿದೆ, ಜನರು ತೊಟ್ಟುಕೊಂಡ ನಡುವಿಗೆ ಸುತ್ತಿಕೊಂಡ ಲುಂಗಿಗಳು, ಗರಿಗಳಿಂದ ಕೂಡಿದ

---

[1] ಉಚ್ಚತರ ಸೂಕ್ಷ್ಮ ಸ್ತರಗಳಿಗೆ ತೆರೆದುಕೊಂಡ ಮಧ್ಯವರ್ತಿ.

ತಲೆಯ ಮೇಲಿನ ತೊಡುಗೆಗಳು, ರತ್ನಾಲಂಕಾರಗಳು, ಇಳಿವಸ್ತ್ರಗಳು ಇವೆಲ್ಲ ಕೂಡಿಕೊಂಡು ಸಮೃದ್ಧ, ಕುತೂಹಲಕರ ಸಾಮರಸ್ಯವನ್ನುಂಟು ಮಾಡುತ್ತವೆ. ಪ್ರತಿಯೊಬ್ಬರ ದೃಷ್ಟಿ ಹಜಾರದ ಉತ್ತರ ತುದಿಯತ್ತ ನೆಟ್ಟಿದೆ. ಆ ತುದಿಯ ಮಧ್ಯದಲ್ಲಿ ಹನ್ನೆರಡು ಪಾವಟಿಗೆಗಳ ಸಿಂಹಾಸನವೊಂದಿದೆ, ಅದರ ಮೇಲೆ ಕಿರೀಟಪ್ರಾಯವಾದ ಮಖಮಲ್ ಬಣ್ಣದ ಮೇಲಾವರಣವಿದೆ. ಪಾವಟಿಗೆಗಳ ಪಾದದಡಿಯಲ್ಲಿ ಎರಡು ತರುಣ ವಯಸ್ಸಿನ ಸಿಂಹಗಳಿವೆ, ಅವು ಇಬ್ಬರು ಬಲಶಾಲಿ ಮತ್ತು ಶಾಂತರೀತಿಯ ಪಹರೆಯವರಿದ್ದ ಹಾಗಿವೆ. ಸಿಂಹಾಸನದ ಎಡಬದಿಯಲ್ಲಿ ಥಳಥಳಿಸುವ ಬಾಗುಕೊಕ್ಕಿನ ಬೆಳ್ಳಕ್ಕಿ ತನ್ನ ನಸುಗೆಂಪಿನ ಕಾಲುಗಳ ಮೇಲೆ ನಿಂತಿದೆ. ಮತ್ತು ಮಧ್ಯದಲ್ಲಿ ಸುಂದರ ಕೂದಲಿನ ಮಧ್ಯವರ್ತಿ ತನ್ನ ಎಡಗೈಯಲ್ಲಿ ಬಿಳಿ ಕಮಲವನ್ನು ಹಿಡಿದುಕೊಂಡಿರುವುದನ್ನು ನಾನು ನೊಡುತ್ತೇನೆ.

ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬರೂ ಅವಳ ಮುಂದೆ ಹಾಯ್ದು ಹೋಗುತ್ತಾರೆ ಮತ್ತು ಪಾವಟಿಗೆಗಳ ಎದುರಿನಲ್ಲಿ ಸ್ವಾಮಿನಿಷ್ಠೆ ಕುರಿತು ಆಣೆ ಮಾಡಿ ಹೇಳುತ್ತಾರೆ.

ಎರಡನೆಯ ಸಲ ನಾನು ನಿದ್ದೆ ಮಾಡಿದೆ ಮತ್ತು ಎಚ್ಚತ್ತುಕೊಂಡಾಗ ವಿಚಿತ್ರ ಹಾಗೂ ಅದ್ದೂರಿಯಾದ ಹಿಂದೂ ಶೈಲಿಯ ದೇವಾಲಯದ ಎದುರು ನಾನಿರುವುದನ್ನು ಕಂಡುಕೊಂಡೆ. ಮೆಣಕಾಲೂರಿ ನಿಂತಿರುವ ಆನೆಗಳು ಚೌಕಾಕಾರದ ಬಾಗಿಲಿನ ಎರಡೂ ಬದಿಗಳಲ್ಲಿರುವ ಕಂಬಗಳಿಗೆ ಆಧಾರ ಒದಗಿಸಿವೆ. ಬಾಗಿಲು ತೆರೆದಿದೆ. ಜನರು ಬಿಳಿ, ನೀಲಿ, ನೇರಳೆ ಬಣ್ಣ ಮತ್ತು ಕಡುಗೆಂಪು ಬಣ್ಣಗಳಿರುವ ಉದ್ದ ನಿಲುವಂಗಿ ಧರಿಸಿದ್ದಾರೆ. ಅವರು ಒಬ್ಬೊಬ್ಬರಾಗಿ ಇಲ್ಲವೆ ಗುಂಪಿನಲ್ಲಿ ಒಳಗೆ ಪ್ರವೇಶಿಸುತ್ತಾರೆ. ನಾನು ಅವರನ್ನು ಅನುಸರಿಸಿ ಹೋಗುತ್ತೇನೆ. ಮತ್ತು ಅನೇಕ ಮೊಗಸಾಲೆಗಳನ್ನು ದಾಟಿ ಹೋದ ನಂತರ ನಾನು ಚಿಕ್ಕ ಚೌಕಾಕಾರದ ಹಜಾರದತ್ತ ಬರುತ್ತೇನೆ, ಅದರಲ್ಲಿ ಪೂರ್ವ ದೇಶಗಳ ನೀಲ ವರ್ಣದ ಕಮಾನು ಚಾವಣಿಯಿದೆ. ಅದು ಮೂವತ್ತಾರು ಬಲಿಷ್ಠ ಕಂಬಗಳ ಆಧಾರ ಪಡೆದಿದೆ. ಜನರು ತಮ್ಮ ಕಾರ್ಯಕ್ಕನುಗುಣವಾಗಿ, ಅಂತಸ್ತಿನ ಪ್ರಕಾರ ಒಟ್ಟಿಗೆ ಸೇರುತ್ತಾರೆ ಮತ್ತು ಮೌನದಿಂದ ಉಳಿದುಕೊಳ್ಳುತ್ತಾರೆ. ಒಮ್ಮೆಗೆ ಹಜಾರದ ತುದಿಯನ್ನು ಆವರಿಸಿದ್ದ ಪರದೆಯನ್ನು ಮೇಲಕ್ಕೆತ್ತಲಾಗುತ್ತದೆ, ಅಲ್ಲಿ ಉಜ್ವಲ ಪ್ರಕಾಶವಿದ್ದ ಆಕಾರ ಗೋಚರವಾಗುತ್ತದೆ. ಆ ಆಕಾರ ಹೆಜ್ಜೆ ಮುಂದಿರಿಸುತ್ತದೆ ಮತ್ತು ಶ್ರೇಣಿ ವ್ಯವಸ್ಥೆಗನುಗುಣವಾಗಿ ರಚಿಸಿದ ವೃತ್ತಗಳ ಕೇಂದ್ರದಲ್ಲಿ ನಿಂತುಕೊಳ್ಳುತ್ತದೆ.



ನಾನು ತರುಣ ವಯಸ್ಸಿನ ಆ ಮಧ್ಯವರ್ತಿಯನ್ನು ಗುರುತಿಸುತ್ತೇನೆ. ತನ್ನ ಬಿಚ್ಚಿದ ಕೂದಲಿನ ನಡುವೆ ಬಿಳಿ ಕಮಲದ ಹೂವನ್ನು ಅವಳು ಧರಿಸಿದ್ದಳು, ಅದೊಂದೇ ಅವಳ ಆಭರಣವಾಗಿದೆ. ಅವಳು ಉದ್ದವಾದ ಬಿಳಿ ಬಣ್ಣದ ಮೋಟು ಜುಬ್ಬ ಧರಿಸಿದ್ದಾಳೆ, ಬಂಗಾರದ ನಡುಪಟ್ಟಿ ಅವಳ ನಡುವಿನ ಸುತ್ತ ಇದೆ.

ಮತ್ತೊಮ್ಮೆ ಎಲ್ಲವೂ ನನ್ನ ದೃಷ್ಟಿಯಿಂದ ಮಸಕಾಗುತ್ತಿದೆ. ಎಚ್ಚತ್ತುಕೊಂಡಾಗ ವಿಶಾಲ ಓಕ್(Oak) ಗಿಡಗಳಿರುವ ಅರಣ್ಯದ ಮಧ್ಯದಲ್ಲಿ ನಾನಿರುವಂತೆ ಕಂಡುಕಂಡೆ. ದೂರದಲ್ಲಿ ಎತ್ತರವಾಗಿದ್ದ ಗಿಡಗಳ ಕಾಂಡಗಳ ನಡುವೆ ಹಸಿರು ಬಣ್ಣದ ಸಮುದ್ರ ಇರುವುದನ್ನು ಇಣಿಕಿ ನೋಡಬಹುದು, ಅದು ಮುಳುಗುವ ಸೂರ್ಯನ ಬೆಳಕಿನಲ್ಲಿ ತಾಮ್ರವರ್ಣದ್ದಾಗಿ ಪ್ರಜ್ವಲಿಸುತ್ತಿದೆ. ಪಶ್ಚಿಮ ದೇಶದ ದ್ವೀಪವೊಂದರ ಮೇಲೆ ನಾನಿದ್ದೇನೆ ಎಂಬ ಭಾವನೆ ನನಗೆ ಬರುತ್ತಿದೆ.

ಕುರುಚಲು ಕಾಡಿನಿಂದ ಬಿಳಿ ವಸ್ತ್ರ ಧರಿಸಿದ ಕನ್ನಿಕೆಯರು ಸಾಲುಗಟ್ಟಿ ಮುಂದುವರಿದು ಬರುತ್ತಿರುವುದನ್ನು ನಾನು ನೋಡುತ್ತೇನೆ, ಆ ಸಾಲುಗಳಿಗೆ ಮಾರ್ಗದರ್ಶನ ಮಾಡುತ್ತಿರುವವರು ತಮ್ಮ ಕೈಗಳಲ್ಲಿ ಸಂಗೀತದ ಉಪಕರಣ–ಗಳನ್ನು ಹಿಡಿದುಕೊಂಡಿದ್ದಾರೆ, ಹಳೆಯ ಗ್ರೀಕ ವಾದ್ಯ ಲಾಯ್‌ರ್ (lyre) ಮತ್ತು ತಾಳವಾದ್ಯ ಟಿಂಬ್ರೆಲ್ (timbrel) ಇವುಗಳ ನಾದಕ್ಕನುಗುಣವಾಗಿ ರಾಗವಾಗಿ ಹಾಡುತ್ತ ತಿರುಗುತ್ತ, ಹೋಗುತ್ತ ಮುಂದುವರಿಯುತ್ತಿದ್ದಾರೆ. ನಂತರ ಆ ಕನ್ನಿಕೆಯರು ಕೈ, ಕೈ ಜೋಡಿಸಿ ನರ್ತನ ಮಾಡಲು ಪ್ರಾರಂಭಿಸುತ್ತಾರೆ, ಹೆಚ್ಚು ಎತ್ತರವಿರುವ, ದಪ್ಪಗಾಗಿರುವ ಓಕ ಗಿಡವನ್ನು ಕೇಂದ್ರವನ್ನಾಗಿ ಮಾಡಿಕೊಂಡು ವೃತ್ತವನ್ನು ರಚಿಸುತ್ತ ಸಾಗಿ ಹೊಗುತ್ತಾರೆ.

ತನ್ನ ನಾಲ್ಕು ಜನ ಜೊತೆಗಾರರೊಂದಿಗೆ ಈಗ ತರುಣ ವಯಸ್ಸಿನ, ಸುಂದರ ಕೂದಲಿನ ಮಧ್ಯವರ್ತಿ ಬರುತ್ತಾಳೆ. ಆಕೆ ಕೈಯಲ್ಲಿ ಬಂಗಾರದ ಕುಡುಗೋಲು ಹಿಡಿದಿದ್ದಾಳೆ, ಗಂಭೀರ ಹಾಗೂ ಧ್ಯಾನಾಸಕ್ತ ಹೆಜ್ಜೆ ಇರಿಸುತ್ತ ಮುಂದೆ ಚಲಿಸುತ್ತಾಳೆ. ಪ್ರಾಚೀನ ಕಾಲದ ಓಕ ಗಿಡದ ಪಾದದಡಿ ನಿಲ್ಲುತ್ತಾಳೆ, ತನ್ನೊಡನೆ ಬಂದ ಒಬ್ಬ ತರುಣ ಬಾಲಕನಿಗೆ ತನ್ನ ಕುಡುಗೋಲನ್ನು ಕೊಡುತ್ತಾಳೆ. ಅವನು ಚುರುಕಾಗಿ ಗಿಡದ ಮೇಲೇರಿ ಹೊಗುತ್ತಾನೆ, ಅಲ್ಲಿದ್ದ ಚೆಂಡಿನಾಕಾರದ ಪರೋಪಜೀವಿ ಸಸ್ಯವನ್ನು ಒಂದೇ ಏಟಿನಿಂದ ಕಡಿದು ಹಾಕುತ್ತಾನೆ. ಅದನ್ನು ಹಿಡಿದುಕೊಳ್ಳಲೆಂದು ತರುಣಿಯೊಬ್ಬಳು ಮುಂದೆ ಚಾಚಿದ ಮೋಟು ಜುಬ್ಬದ ಮೇಲೆ ಅದು ಬೀಳುತ್ತದೆ.

ನಂತರ ಆ ಕನ್ನಿಕೆಯರು ತಮ್ಮ ಇಂಪಾದ ಧ್ವನಿಯಿಂದ ರಾಗವಾಗಿ ಹಾಡುತ್ತ ಬಂದ ದಾರಿಯಿಂದ ಮರಳಿ ಹೋಗುತ್ತಾರೆ.

ನಾನು ನಾಲ್ಕನೆಯ ಸಲ ನಿದ್ದೆ ಮಾಡುತ್ತೇನೆ ಮತ್ತು ಎಚ್ಚೆತ್ತುಕೊಂಡಾಗ ನಾನು ಆ್ಯಡ್ರಿಯಾಟಿಕ್‌ದ ರಾಣಿಯ ರಾಜಾಧಿಕಾರದ ಅತ್ಯಂತ ಮನೋಹರ ಗಳಿಗೆಯಲ್ಲಿದ್ದ ಅನನ್ಯ, ಅದ್ಭುತ ವಾತಾವರಣದಲ್ಲಿ ಇರುವೆನೆಂಬ ಭಾವನೆ ತಂದುಕೊಂಡೆ.

ವಿಚಿತ್ರ ಮತ್ತು ಸಾಧುಸ್ವಭಾವಕ್ಕೆ ಒಳಗಾಗದ ವೆನಿಸ್ ನಗರ – ಲಲಿತ ಕಲೆ ಹಾಗೂ ದುಡುಕಿನ ಭಾವೋದ್ರೇಕದ ನಗರ – ಈ ನಗರದ ಗೋಡೆಗಳಿಂದ ಅಪರಾಧ ಹೊರಸೂಸುತ್ತಿತ್ತು, ಕಾಲುವೆಗಳಿಂದ ನಾಟಕ ಹೊರಹೊಮ್ಮುತ್ತಿತ್ತು. ಇಲ್ಲಿ ಶೋಭಾಯಮಾನವಾದ ಅರಮನೆಗಳು ತಮ್ಮೆಲ್ಲ ಏಳಿಗೆ ಹೊಂದುತ್ತಿರುವ ತಾರುಣ್ಯದಿಂದ ವೈಭವೋಪೇತವಾಗಿವೆ, ಇಲ್ಲಿ ಈ ನಗರಕ್ಕೆ ವಿಶಿಷ್ಟವಾಗಿರುವ, ನೀರು ಕಾಲುವೆಗಳಲ್ಲಿ ಉಪಯೋಗಿಸುವ ಹಗುರು ಡೋಣಿಗಳಿವೆ, ಅವು ಮೃದು ಸ್ವಭಾವದ ಮಹಿಳೆಯರನ್ನು, ಶ್ರೇಷ್ಠ ಮಹನೀಯರನ್ನು ವ್ಯವಸ್ಥಿತವಾಗಿ ಕರೆದೊಯ್ಯುತ್ತಿವೆ.

ಆದರೆ ನಾನು ಆಂತರಿಕ ಸಾಮರ್ಥ್ಯಪೂರ್ಣ ಸಂವೇದನೆಯಿಂದ ಡ್ಯೂಕಲ್ (Ducal) ಅರಮನೆಯತ್ತ ಎಳೆತಕ್ಕೊಳಗಾಗಿದ್ದೇನೆ. ಅಲ್ಲಿ ನಾನು ಶತಮಾನಗಳ ಕಾಲದಿಂದ ನೋಡುತ್ತ ಬಂದಿದ್ದ, ಇತ್ತೀಚೆಗೆ ನೋಡಿದ್ದ ಒಬ್ಬರನ್ನು ನೋಡಲಿರುವೆ ಎಂಬುದು ನನಗೆ ತಿಳಿದಿದೆ.

ನಾನು ಆ ವಿಶಾಲ ಅಂಗಳವನ್ನು ಪ್ರವೇಶಿಸುತ್ತೇನೆ, ಅಲ್ಲಿ ದೈತ್ಯಾಕಾರದ ಮೆಟ್ಟಿಲು ಸಾಲಿನ ಹತ್ತಿರವಿದ್ದ ಕಂಬದ ಹಿಂದೆ ಅಡಗಿದಂತೆ ಕಾಣುತ್ತಿದ್ದ ಸುಂದರ ಕೂದಲಿನ, ತರುಣ ವಯಸ್ಸಿನ ಮಧ್ಯವರ್ತಿಯನ್ನು ನೋಡುತ್ತೇನೆ, ಅವಳು ಬಿಳಿ ಬಣ್ಣದ ನಿಲುವಂಗಿ ಧರಿಸಿದ್ದಾಳೆ. ಅವಳು ಸುಂದರಾಂಗನಂತೆ ಕಂಡುಬರುವ ವೃದ್ಧನ ತೋಳಿಗೆ ಅಂಟಿಕೊಂಡಿದ್ದಾಳೆ, ಅವನು ಅವಳನ್ನು ರಕ್ಷಿಸುವ ರೀತಿಯಲ್ಲಿ ತನ್ನ ತೋಳುಗಳಿಂದ ಬಳಸಿ ಹಿಡಿದುಕೊಂಡಿದ್ದಾನೆ. ಅವರ ಮುಖಗಳು ವೇದನಾಪೂರ್ಣವಾಗಿವೆ, ಅವರ ನಿಲುವು ಗಂಭೀರವಾಗಿದೆ: ಹೀಗೆ ಒಟ್ಟಿಗೆ ಅಂಟಿಕೊಂಡಿದ್ದ ಅವರು ಆಡಂಬರದ ಮೆರವಣಿಗೆಯೊಂದು ನಿಧಾನವಾಗಿ ಅರಮನೆಯತ್ತ ಕರೆದೊಯ್ಯುವ ಮೆಟ್ಟಿಲುಗಳನ್ನು ಏರಿ ಬರುತ್ತಿರುವುದನ್ನು ಗಮನಿಸುತ್ತಾರೆ ಮತ್ತು ಇವರೀರ್ವರ ಅದೃಷ್ಟ ಮರ್ತ್ಯ ಶತ್ರುಗಳಾದ ಇವರ ಕೈಯಲ್ಲಿದೆ ಎಂಬ ಭಾವನೆ ನನಗೆ ಬರುತ್ತಿದೆ.



ನಂತರ ಆ ವೃದ್ಧ ಮನುಷ್ಯ ಮುಂದೆ ಬಾಗಿ ಮಗುವಿನಂತಿರುವ ಆ ತರುಣಿಯ ಹುಬ್ಬುಗಳ ಮೇಲೆ ಮುತ್ತಿಡುತ್ತಾನೆ: "ನಾವು ಮನುಕುಲದ ವಿಮೋಚನೆಯಂತಹ ಪವಿತ್ರ ಉದ್ದೇಶಕ್ಕಾಗಿ ಹಲವಾರು ಯುಗಗಳ ಕಾಲದಲ್ಲಿ, ಬದಲಾಗುತ್ತಿರುವ ಪರಿಸ್ಥಿತಿಗಳಡಿಯಲ್ಲಿ ಹೋರಾಡಿದ್ದೇವೆ."

"ಮತ್ತೊಮ್ಮೆ ನಮ್ಮ ಗಂಭೀರ ಪ್ರಯತ್ನ ಮಾಡಿದ್ದೇವೆ ಮತ್ತು ಅದು ವ್ಯರ್ಥವಾಗುವುದಿಲ್ಲ. ಮಾನವನ ಶತ್ರುಗಳು ಈಗ ನಮಗಿಂತ ಬಲಿಷ್ಠರಾಗಿರುವಂತೆ ಕಂಡುಬರಬಹುದು, ಆದರೆ ನಮ್ಮ ಕಾಲ ಅನಿವಾರ್ಯವಾಗಿ ಬಂದೇ ಬರುವುದು. ಅವರು ವಿಭಜನೆಗಾಗಿ ಮಿಥ್ಯೆಗಾಗಿ ಕಾರ್ಯ ಮಾಡುತ್ತಾರೆ. ನಾವು ದೈವೀ ಸತ್ಯ ಹಾಗೂ ಸಾಮರಸ್ಯಗಳಿಗಾಗಿ ಹೋರಾಡುವವರ ಹಾಗೂ ಯಾವಾಗಲೂ ಹೋರಾಡಿದವರ ವರ್ಗಕ್ಕೆ ಸೇರಿದ್ದೇವೆ, ದೈವೀ ಸತ್ಯ ಹಾಗೂ ಸಾಮರಸ್ಯ ಇವು ಮಾತ್ರ ಅಮರವಾದವುಗಳು. ಸಮರ ಹೆಚ್ಚು ಕಠಿಣವಾದ ಹಾಗೆ, ವಿಜಯದ ಸಾಧ್ಯತೆ ಹೆಚ್ಚಾಗುವುದು. ಫಲಿತಾಂಶ ನಿಶ್ಚಿತವಾದಾಗ ಪ್ರಯತ್ನ ಹೆಚ್ಚಿನ ಮಹತ್ವದ್ದಾಗಿರುವುದಿಲ್ಲ."

ಮೃದು ಧ್ವನಿಯಲ್ಲಿ ಮಗುವಿನಂತಹ ಆ ಯುವತಿ ಹೇಳುತ್ತಾಳೆ: "ನಿಜವಾಗಿ ಅದು ಹಾಗಿದೆ, ನಾವು ಮುಂದಿನ ಸಲ ಪೃಥ್ವಿಗೆ ಬಂದಾಗ ವಿಜಯ ದೊರಕಿಸುವುದಕ್ಕೆ ಸಾಕ್ಷಿಯಾಗಿರುತ್ತೇವೆ!"

*

## ದರ್ಶನ – 6

ನಾನು ನಿದ್ದೆ ಮಾಡಿದೆ ಮತ್ತು ಈಗ ಎಚ್ಚೆತ್ತುಕೊಂಡಿದ್ದೇನೆ.

ದೀರ್ಘವಾಗಿದ್ದ ಹಾಗೂ ಕಮಾನುಚಾವಣಿಯಿದ್ದ ಮಾರ್ಗದ ಹೊಸ್ತಿಲ ಬಳಿ ಎಚ್ಚೆತ್ತುಗೊಂಡೆ. ಈ ಮಾರ್ಗ ಪಾರದರ್ಶಕ ಪಚ್ಚೆ ಹಸುರು ಬಣ್ಣದ ಅಲೆಯಾಕಾರದ ಏರಿಳಿತಗಳಿಂದ ಕೂಡಿದೆ, ಆ ಏರಿಳಿತಗಳು ನೀರಿನ ನಿಶ್ಚಲ ಮೇಲ್ಮೈಯ ಮೇಲೆ ಕಲ್ಲೊಂದನ್ನು ಎಸೆದಾಗ ಉಂಟಾಗುವ ಕಿರುದೆರೆಗಳ ಹಾಗೆ ಪ್ರವಹಿಸುತ್ತವೆ. ಆ ಪ್ರಕಾಶಮಯ ಇಂದ್ರನೀಲ ವರ್ಣದ ಕಮಾನುಚಾವಣಿಗೆ ಆಧಾರ ನೀಡಲು ಚಿಕ್ಕ ತಿಳುವಾದ ಕಂಬಗಳ ಎರಡು ಸಾಲುಗಳಿವೆ, ಆ ಕಂಬಗಳನ್ನು ಗಂಧಕಯುಕ್ತ ಸಿಲಿಕೇಟಗಳಿಂದಾದ ಒಂದು ಪ್ರಕಾಶಮಾನವಾದ ನೀಲಿ ಶಿಲೆ(lapis lazuli)ಯಿಂದ ಮಾಡಲಾಗಿದೆ. ಕಂಬಗಳ ನಡುವೆ

ಪೇಲವವಾದ ಪಚ್ಚೆ ಹಸುರಿನ ಪ್ರಕಾಶವನ್ನು ಕಾಣಬಹುದಾಗಿದೆ. ಇದೆಲ್ಲ ಪ್ರಶಾಂತ, ಹಸುರು ಬಣ್ಣದ ಸಮುದ್ರದ ತಳದಲ್ಲಿದೆ ಎನಿಸುವಂತಿದೆ.

ನನಗೆ ಆ ಮಾರ್ಗದತ್ತ ಎಳೆತ ಉಂಟಾಗುತ್ತಿದೆ, ಆ ಮಾರ್ಗ ಕಣ್ಣಿಗೆ ಕಾಣಿಸುವಷ್ಟು ದೂರ ಚಾಚಿಕೊಂಡಿದೆ. ನಾನು ಅದರಲ್ಲಿ ಪ್ರವೇಶಿಸುತ್ತೇನೆ. ಕಿರುದೆರೆಗಳು ನನ್ನನ್ನು ಹೊತ್ತುಕೊಂಡು ತೀವ್ರ ಹಾಗೂ ಲಯಬದ್ಧ ಗತಿಯಲ್ಲಿ ಚಲಿಸುತ್ತಿವೆ ಮತ್ತು ನಾನು ಆ ರೀತಿ ಚಲಿಸುವುದನ್ನು ದೀರ್ಘಕಾಲ ಕೈಕೊಳ್ಳುತ್ತೇನೆ. ನಾನು ಮುಂದೆ ಹೋಗುತ್ತಿದ್ದ ಹಾಗೆ ಆ ಚಲನೆ ವೇಗೋತ್ಕರ್ಷ ಪಡೆಯುತ್ತದೆ. – ನಾನು ಬಹಳ ದೂರ ಆ ರೀತಿ ಪ್ರಯಾಣ ಮಾಡಿರಬಹುದು, ಪ್ರಯಾಣಕ್ಕೆ ಕೊನೆಯೇ ಇಲ್ಲವೇನೋ ಎನಿಸುತ್ತಿದೆ, ಏಕೆಂದರೆ ಈ ಮಾರ್ಗದ ಕೊನೆಯಲ್ಲಿ ಏನಿದೆ ಎಂಬುದನ್ನು ನಾನು ನೋಡಲು ಬಯಸುತ್ತೇನೆ. ಒಮ್ಮೆಗೆ ಶ್ವೇತ ಬಿಂದುವೊಂದು ಪ್ರತ್ಯೇಕವಾಗಿ ಕಾಣಿಸಿಕೊಳ್ಳುತ್ತದೆ. ಸಂಕಲ್ಪದ ಪ್ರಯತ್ನದ ಮೂಲಕ ನನ್ನ ವೇಗವನ್ನು ಹೆಚ್ಚಿಸಿಕೊಳ್ಳುತ್ತೇನೆ. ನಾನು ಆ ಬಿಂದುವಿನತ್ತ ಹೋದಾಗ ಅದು ಬಿಳಿ ಬಣ್ಣದ ಚೌಕವಾಗಿರುವಂತೆ ಕಂಡು ಬರುತ್ತದೆ. ಅದರ ತಳವನ್ನು ತಲುಪಿದಾಗ ಅದು ಭವ್ಯವಾಗಿರುವುದನ್ನು ನೋಡುತ್ತೇನೆ. ಆಗ ಪ್ರಯಾಣದಿಂದ ನಾನು ದಣಿದುಕೊಂಡದ್ದರಿಂದ ಕೆಳಗೆ ಒರಗಿಕೊಳ್ಳುತ್ತೇನೆ ಮತ್ತು ನಿದ್ದೆ ಮಾಡುತ್ತೇನೆ.

ನಾನು ನಿದ್ರಿಸುತ್ತಿದ್ದಾಗ ನನ್ನ ಬುದ್ಧಿಮತ್ತೆ ಎಚ್ಚತ್ತುಗೊಳ್ಳುತ್ತದೆ ಮತ್ತು ನಾನು ಇದೀಗ ನೋಡಿದ್ದು ನನಗೆ ಅರ್ಥವಾಗುತ್ತದೆ.

ನನಗೆ ತಿಳಿದು ಬಂದುದೇನೆಂದರೆ ನೀಲಿ ಬಣ್ಣದ ಕಮಾನುಚಾವಣಿಯಿಂದ ಅಲಂಕೃತವಾದ ಪಚ್ಚೆ ಹಸುರಿನ ನೆಲಗಟ್ಟನ್ನು ಹೊಂದಿದ ಈ ಮಾರ್ಗ ಬೌದ್ಧಿಕ ಉತ್ಕ್ರಾಂತಿಯ ಮಾರ್ಗವಾಗಿದೆ ಎಂಬುದು. ಸದಿಚ್ಛೆಯುಳ್ಳ ಜನರಿಗಾಗಿ ಈ ಮಾರ್ಗ ಜೀವನದಲ್ಲಿ ತೆರೆದುಕೊಂಡಿದೆ. ಅದು ದೀರ್ಘ ಹಾಗೂ ತೇಜಃಪುಂಜವಾದ ಮಾರ್ಗ, ಅದು ನಾಲ್ಕು ಬಗೆಯ ಸಮತೋಲನವನ್ನು ಇಷ್ಟಪಡುವ ಜನರನ್ನು ಅದರತ್ತ ಕರೆದೊಯ್ಯುತ್ತದೆ.

ಇದನ್ನು ಅರ್ಥಮಾಡಿಕೊಂಡ ನಂತರ, ಹೊಸ ಚೈತನ್ಯದಿಂದ ತುಂಬಿ–ಕೊಂಡು, ಬಲ ದೊರಕಿಸಿದವಳಾಗಿ ಎಚ್ಚತ್ತುಕೊಂಡೆ, ಏಕೆಂದರೆ ನಾನು ನೇರಳೆ ಬಣ್ಣದ, ಬಿಸಿಲು ಬೀಳದ ಸ್ಥಳದಲ್ಲಿ ನಿದ್ರಿಸಿದ್ದೆ. ಆ ಬಿಳಿ ಬಣ್ಣದ ಚೌಕ ಮೊದಲು ನನ್ನಿಂದ ಅಡಗಿಸಿಟ್ಟದ್ದನ್ನು ನಾನು ಈಗ ನೋಡಲಿದ್ದೇನೆ ಎಂಬ ಭಾವನೆ ಬಂದಿತು.



ನಿಜವಾಗಿ, ನಾಲ್ಕು ಗರುಡ ಪಕ್ಷಿಗಳು ಕಾಣಿಸಿಕೊಳ್ಳುತ್ತವೆ, ಅವು ಕಪ್ಪು ಮಿಶ್ರಿತ ನೀಲಿ ಬಣ್ಣದವಾಗಿವೆ, ಬೆನ್ನಿಗೆ ಬೆನ್ನು ತಗಲಿಸಿ ಚೌಕಾಕಾರದಲ್ಲಿ ಕುಳಿತುಕೊಂಡಿವೆ ಮತ್ತು ನಾಲ್ಕು ಪ್ರಧಾನ ಬಿಂದುಗಳನ್ನು ಎದುರಿಸುತ್ತಿವೆ, ತಲೆಯ ಮೇಲೆ ಚಿಕ್ಕಹಲಗೆ (table) ಹೊತ್ತುಕೊಂಡಿವೆ, ಆ ಹಲಗೆಯ ಮೇಲೆ ಬಿಳಿ ಮೋಡ ಎದ್ದು ಬರುತ್ತಿದೆ. ಮೋಡದಾಚೆಗೆ ಬಹಳ ಉಜ್ವಲ ಪ್ರಕಾಶ ಹೊಳೆಯುತ್ತಿದೆ. ಆ ಪ್ರಕಾಶ ಕುರಿತು ಧ್ಯಾನಮಗ್ನಳಾದ ನಂತರ ನನ್ನ ನೆಟ್ಟನೋಟವನ್ನು ಆ ಗರುಡ ಪಕ್ಷಿಗಳತ್ತ ಮತ್ತೆ ಹೊರಳಿಸುತ್ತೇನೆ ಮತ್ತು ಅವು ಬಿಳಿ ಬಣ್ಣದವಾಗಿವೆ ಮತ್ತು ಮಸುಕಾಗಿ ತೇಜಃಪುಂಜವಾಗಿರುವುದನ್ನು ನೋಡುತ್ತೇನೆ.

ಅವುಗಳನ್ನು ನೋಡುತ್ತಿದ್ದ ಹಾಗೆ ನನಗೆ ನಿದ್ರೆ ಆವರಿಸುತ್ತದೆ, ಮತ್ತೆ ನನ್ನ ಬುದ್ಧಿಮತ್ತೆ ಎಚ್ಚತ್ತುಕೊಂಡು ನಾನು ಇದೀಗ ನೋಡಿದ್ದನ್ನು ಅರ್ಥಮಾಡಿ–ಕೊಳ್ಳುವಂತೆ ಮಾಡುತ್ತದೆ.

ಮೊದಲು ನನ್ನ ಮಾನಸಿಕ ದರ್ಶನದೊಂದಿಗೆ ಒಲವು ಹೊಂದಿದ್ದ ಆ ಗರುಡ ಪಕ್ಷಿಗಳು – ಆ ಕಾರಣದಿಂದಾಗಿ ಅವು ನೀಲಿ ಬಣ್ಣದವಾಗಿದ್ದವು – ನಾಲ್ಕು ಪ್ರಧಾನ ಬಿಂದುಗಳನ್ನು ಎದುರಿಸುತ್ತಿವೆ, ಏಕೆಂದರೆ ಅವು ಜೀವನ ಹಾಗೂ ಪ್ರಕಾಶ, ಪ್ರಕಾಶ ಹಾಗೂ ಸಾಮರ್ಥ್ಯ, ಸಾಮರ್ಥ್ಯ ಹಾಗೂ ಉಪಯುಕ್ತತೆ, ಉಪಯುಕ್ತತೆ ಹಾಗೂ ಪ್ರಕಾಶ ಇವುಗಳತ್ತ ಹೊರಳಿವೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅವು ಜೀವನದಲ್ಲಿ ಪರಿಪೂರ್ಣತೆಯನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ಕಾದುಕೊಂಡಿವೆ, ಅದರಿಂದಾಗಿ ಬುದ್ಧಿಮತ್ತೆಯು ಶಾಶ್ವತ ವ್ಯಕ್ತೀಕರಣ ಹೊಂದುವುದಕ್ಕಾಗಿ ಜೀವನ ತಯಾರಾಗಬಹುದಾಗಿದೆ; ಮತ್ತು ಅವು ವ್ಯಕ್ತೀಕರಣ ಹೊಂದಿದ ಬುದ್ಧಿಮತ್ತೆಗಾಗಿ ಕಾದುಕೊಂಡಿವೆ, ಅದರಿಂದಾಗಿ ಅದು ಸಾಮರ್ಥ್ಯವನ್ನು ವಿನಿಯೋಗಿಸುವುದಕ್ಕಾಗಿ ಯೋಗ್ಯವಾಗಬೇಕಾಗಿದೆ, ಆ ಸಾಮರ್ಥ್ಯ ಉಪಯುಕ್ತತೆಯಲ್ಲಿ ಹಾಗೂ ಉಪಯುಕ್ತತೆಯ ಮೂಲಕ ಪ್ರಕಟವಾಗಬೇಕಾಗಿದೆ, ಆ ಸಾಮರ್ಥ್ಯವನ್ನು ಪೃಥ್ವಿಯ ಹಾಗೂ ಮಾನವನ ಪರಿಪೂರ್ಣತೆಗಾಗಿ ಉಪಯೋಗಿಸಬೇಕಾಗಿದೆ. ಮತ್ತು ಇದು ಮೋಡ ಪ್ರತಿನಿಧಿಸುತ್ತಿರುವ ಪರದೆಯನ್ನು ಮೇಲಕ್ಕೆತ್ತಲು ಮತ್ತು ಥಳಥಳಿಸುವಂತೆ ಪ್ರಜ್ವಲಿಸುತ್ತಿರುವ ಪ್ರಕಾಶದಂತಿರುವ ಉಚ್ಚತರ ಬುದ್ಧಿಮತ್ತೆಯನ್ನು ಸಿದ್ಧಿಸಿಕೊಳ್ಳಲು ಅನುವು ಮಾಡಿಕೊಡುವುದು. ಈ ಪ್ರಕಾಶದ ಮೂಲಕ ಮನುಷ್ಯ ಸಮತೋಲನದ ದೃಶ್ಯವನ್ನು ನೋಡುವನು – ಆ ದರ್ಶನ ಒಮ್ಮೆಗೆ ಪ್ರೇಮಪೂರ್ಣವಾದದ್ದು,

ಆಧ್ಯಾತ್ಮಿಕ ಬೌದ್ಧಿಕ ಹಾಗೂ ಪ್ರಾಣಿಕವಾದದ್ದು ಆಗಿರುತ್ತದೆ – ಉತ್ಕ್ರಾಂತಿ ಹೊಂದುತ್ತಿರುವ ಅತಿಮಾನವ ಮತ್ತು ಉಚ್ಚತರ ಪ್ರಭಾರಾಶಿಗಳು ಇವುಗಳ ನಡುವಿರುವ ಮಧ್ಯವರ್ತಿಗಳನ್ನು ಆ ಗರುಡ ಪಕ್ಷಿಗಳು ಸಂಕೇತಿಸುತ್ತವೆ.

ಈ ವಿವರಣೆ ನನಗೆ ದೊರೆತ ಕೂಡಲೆ ನನ್ನ ಕಣ್ಣುಗಳು ಮತ್ತೊಮ್ಮೆ ತೆರೆದುಕೊಳ್ಳುತ್ತವೆ. ಮತ್ತು ನಾನು ಕಪ್ಪು–ನೀಲಿ ಚೌಕವೊಂದರ ಎದುರಿಗೆ ಎರಡು ಸಮಭಾಗಗಳಲ್ಲಿ ವಿಭಜನೆಗೊಂಡಿರುವ ಒಂದು ಗೋಲ ಆಕಾರ ತಳೆದದ್ದನ್ನು ನೋಡುತ್ತೇನೆ, ಅದರ ಒಂದು ಭಾಗ ಬಿಳಿ ಬಣ್ಣದ್ದು ಮತ್ತು ಬಹಳ ಪ್ರಕಾಶಮಯವಾದದ್ದು, ಇನ್ನೊಂದು ಸುಂದರ ಕಪ್ಪು ನೇರಳೆ ಬಣ್ಣದ್ದು ಆಗಿರುವುದು ಕಂಡುಬರುತ್ತದೆ.

ನಿದ್ರೆಮಾಡಿ ನಾನು ಸಾಧ್ಯತೆಗಳ ಒಂದು ದರ್ಶನದಿಂದ ಸಿದ್ಧಿಸಿಕೊಳ್ಳಲು ಅವಶ್ಯವಿರುವ ಸಾಧನಗಳಿರುವ ದರ್ಶನದತ್ತ ಸಾಗಿ ಹೋಗಿದ್ದೇನೆಂಬುದನ್ನು ಅರಿತುಕೊಳ್ಳುತ್ತೇನೆ. ಪಿತ್ರಾರ್ಜಿತವಾದ, ಸನಾತನ ಹಕ್ಕಿನಿಂದ ನಮ್ಮ ಮನೆಯಾದ ಪೃಥ್ವಿಯನ್ನು ಕುರಿತು ಮಾನಸಿಕ ಸಮತೋಲನದಲ್ಲಿ ಧ್ಯಾನಮಗ್ನಳಾಗಿರುತ್ತೇನೆ, ಆ ಸಮತೋಲನ ಪ್ರಕಾಶ ಹಾಗೂ ಸಾಮರ್ಥ್ಯಗಳ ನಡುವೆ, ಬೌದ್ಧಿಕ ಪ್ರಭಾರಾಶಿ ಮತ್ತು ರಕ್ಷಣಾತ್ಮಕ ಆಶ್ರಯ ಇವುಗಳ ನಡುವೆ ಇರುತ್ತದೆ. ಪೃಥ್ವಿ, ಈಗಿರುವ ರೀತಿಯಲ್ಲಲ್ಲ, ಆದರೆ ಉತ್ಕ್ರಾಂತಿ ಹೊಂದುತ್ತಿರುವ ಅತಿಮಾನವರ ಮೂಲಕ ಆಧ್ಯಾತ್ಮಿಕ ಪ್ರಕಾಶ ಹಾಗೂ ಸಾಮರ್ಥ್ಯಗಳಿಂದ ಉದ್ದೀಪನಗೊಂಡು ಶ್ರೇಣಿ ವ್ಯವಸ್ಥೆಯ ಕ್ರಮದಲ್ಲಿ ವ್ಯವಸ್ಥೆಗೊಳಪಟ್ಟ ರೀತಿಯದಾಗಿರುತ್ತದೆ.

ನನ್ನ ಸ್ಥಿರತೆ ಆಳವಾಗಿದೆ, ನಿಶ್ಚಲವಾಗಿದೆ, ನನ್ನ ಭರವಸೆ ಭವ್ಯವಾಗಿದೆ, ನನ್ನ ಅಭೀಪ್ಸೆ ಗಾಢವಾಗಿದೆ ಮತ್ತು ನಾಲ್ಕನೆಯ ಸಲ ನಾನು ಎಚ್ಚತ್ತುಕೊಳ್ಳುತ್ತೇನೆ.

ಆಳವಾದ ಕೆನ್ನೇರಳೆ ಬಣ್ಣದ ಚೌಕಾಕಾರದ ಪ್ರವೇಶ ದ್ವಾರವನ್ನು ನಾನು ನೋಡುತ್ತೇನೆ, ಅದಕ್ಕೆ ಎರಡು ದೃಢವಾದ ಕಂಬಗಳ ಆಧಾರವಿದೆ, ದ್ವಾರಮಾರ್ಗದ ಮಧ್ಯದಲ್ಲಿ ನೆಲದ ಮೇಲೆ ಎರಡು ನೇರಳೆ ಬಣ್ಣದ ಗರುಡ ಪಕ್ಷಿಗಳು ಒಂದರ ಬಳಿ ಇನ್ನೊಂದು ಒಟ್ಟುಗೂಡಿ ಕುಳಿತಿವೆ. ಒಂದು ಪೂರ್ವ ದಿಕ್ಕಿನತ್ತ ಮುಖ ಮಾಡಿದೆ, ಇನ್ನೊಂದು ಪಶ್ಚಿಮ ದಿಕ್ಕಿನತ್ತ ತಿರುಗಿದೆ.

ಆ ಗರುಡ ಪಕ್ಷಿಗಳ ತಲೆಯ ಮೇಲೆ, ಪ್ರವೇಶ ದ್ವಾರದ ಕೇಂದ್ರದಲ್ಲಿ ಬಿಳಿ



ಬಣ್ಣದ ಭವ್ಯ ಸೂರ್ಯ ತನ್ನ ತೇಜಃಪುಂಜವಾದ ಮತ್ತು ವರ್ಣವೈವಿಧ್ಯದಿಂದ ಕೂಡಿರುವ ಕಿರಣಗಳೊಂದಿಗೆ ಹೊಳೆಯುತ್ತಿದ್ದಾನೆ.

ಈ ಅದ್ಭುತ ದೃಶ್ಯವನ್ನು ನಾನು ನೆಟ್ಟ ದೃಷ್ಟಿಯಿಂದ, ಅಗಾಧ ದಿವ್ಯಾನಂದದಿಂದ ನೋಡುತ್ತಿದ್ದೇನೆ. ಆ ಸೂರ್ಯನ ವೈವಿಧ್ಯಮಯ ಹಾಗೂ ಸುಂದರ ಕಿರಣಗಳಲ್ಲಿ ಒಂದು ನನ್ನ ಶಿರದಲ್ಲಿ ಪ್ರವೇಶಿಸುತ್ತಿದೆ ಎಂಬ ಭಾವನೆ ನನಗೆ ಬರುತ್ತಿದೆ, ನನ್ನೊಳಗೆ ಎಲ್ಲವೂ ಪ್ರಕಾಶಮಯವಾಗಿದೆ. ಈ ಪ್ರವೇಶ ದ್ವಾರ ಜಯಪ್ರದವಾದ ಸಿದ್ಧಿಯೆಡೆಗೆ ಪ್ರವೇಶ ಒದಗಿಸುತ್ತದೆ ಮತ್ತು ಈ ಪ್ರವೇಶ ನಾಲ್ಕು ಬಗೆಯ ಸಮತೋಲನದ ಆಧಾರ ಪಡೆದ ಸಮತೋಲನದ ಸಾಮರ್ಥ್ಯವಾಗಿರುತ್ತದೆ, ಅದು ಉಭಯಾತ್ಮಕತೆ (duality)ಯಲ್ಲಿ ಸೂಕ್ಷ್ಮಗೊಳಿಸಿದ್ದು ಹಾಗೂ ತೇಜಃಪುಂಜವಾದದ್ದು.

ಈ ಪ್ರವೇಶದ ಮಧ್ಯದಲ್ಲಿ, ಎತ್ತರಕ್ಕೆ ಏರುವಂತಹದಲ್ಲ, ಆದರೆ ನೆಲದ ಮೇಲೆ ದೃಢವಾಗಿ ನಿಂತುಕೊಂಡ ಸಾರ್ವಭೌಮ ಕೆನ್ನೀಲಿ ಬಣ್ಣದ ಗರುಡ ಪಕ್ಷಿಗಳ ಜೋಡಿ ಉಪಯುಕ್ತತೆಯಲ್ಲಿರುವ ಸಾಮರ್ಥ್ಯವನ್ನು ಪ್ರತಿನಿಧಿಸುತ್ತವೆ – ಅದು ಪೃಥ್ವಿಯ ಬಲ. ಕರಗಿ ಹೋಗದ ಒಲವಿನ ಬಂಧನದಿಂದ ಅವೆರಡೂ ಏಕವಾಗಿವೆ ಮತ್ತು ಹಾಗಿದ್ದಾಗ್ಯೂ ಒಂದು ನಿಷ್ಕ್ರಿಯವಾಗಿದ್ದು, ವಿಶ್ರಾಂತಿ ಪಡೆಯುವುದರ ಸಂಕೇತವೆಂದಾಗಿ ಸೂರ್ಯ ಮುಳುಗುವ ದಿಶೆಯತ್ತ ಮುಖ ತಿರುಗಿಸಿದೆ ಹಾಗೂ ಇನ್ನೊಂದು ಚಟುವಟಿಕೆಯಿಂದಿದ್ದು ಎಚ್ಚತ್ತುಕೊಂಡಿರುವುದರ ಸಂಕೇತವೆಂದಾಗಿ ಸೂರ್ಯ ಉದಯಿಸುವ ದಿಶೆಯತ್ತ ಮುಖ ತಿರುಗಿಸಿದೆ. ಇವೆರಡೂ ಕ್ರಿಯೆಗಳನ್ನು ಸರಿಯಾಗಿ ಸಮತೂಕದಲ್ಲಿರಿಸಬೇಕು, ಅದರಿಂದಾಗಿ ಮನುಷ್ಯ ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ಮೇಲೇರಿ ಹೋಗಬಲ್ಲ, ಪ್ರಕಾಶದಿಂದ ಇನ್ನೂ ಹೆಚ್ಚು ಪರಿಶುದ್ಧವಾದ, ಹೆಚ್ಚು ತೇಜಃಪುಂಜವಾದ ಪ್ರಕಾಶದತ್ತ ಆರೋಹಣ ಮಾಡಬಲ್ಲ.

ಈ ಸಮತೋಲನದ ಮೂಲಕ ಮಾತ್ರ ಎಲ್ಲ ಶಕ್ತಿಗಳ ಕೇಂದ್ರವಾದ ಭವ್ಯ ಬಿಳಿ ಬಣ್ಣದ ಸೂರ್ಯನ ವೈವಿಧ್ಯಮಯ ಕಿರಣಗಳನ್ನು ಪೃಥ್ವಿಯ ಮಕ್ಕಳು ಪೂರ್ತಿಯಾಗಿ ಉಪಯೋಗಿಸಬಹುದು, ಆ ಉಪಯೋಗ ಒದಗಿಸಬಹುದಾದ ಮಹೋನ್ನತ ಜ್ಞಾನೋದಯಕ್ಕಾಗಿ ಅವರು ಹಪಹಪಿಸುತ್ತಿದ್ದಾರೆ, ಆ ಜ್ಞಾನೋದಯದ ಭವ್ಯತೆ ಹೆಚ್ಚುತ್ತಿದೆ ಮತ್ತು ಅದು ಎಂದೆಂದಿಗೂ ಹೆಚ್ಚುತ್ತಲೇ ಹೋಗುತ್ತದೆ!

*

## ದರ್ಶನ – 7

ನಾನು ನಿದ್ರಿಸಿದ್ದೆ ಮತ್ತು ಈಗ ಎಚ್ಚತ್ತುಕೊಂಡಿದ್ದೇನೆ.

ನಾನು ಎಚ್ಚತ್ತುಕೊಂಡಿದ್ದೇನೆ ಮತ್ತು ಒಬ್ಬ ರಾವುತ ಭವ್ಯ ಬಿಳಿ ಕುದುರೆಯ ಮೇಲೆ ಕುಳಿತದ್ದನ್ನು ನೋಡುತ್ತೇನೆ. ಅವನು ಹೊಳೆಯುತ್ತಿರುವ ಬಂಗಾರ ಬಣ್ಣದ ಎದೆಕಾಪು (breast plate) ಧರಿಸಿದ್ದಾನೆ ಮತ್ತು ಖಡ್ಗವನ್ನು ಝಳಪಿಸುತ್ತಿದ್ದಾನೆ, ಆ ಖಡ್ಗದ ನಗ್ನ ಅಲಗು ಇಂದ್ರನೀಲಮಣಿಯ ಮಿನುಗಿನೊಂದಿಗೆ ಹೊಳೆಯುತ್ತಿದೆ. ಒಂದು ಪ್ರಬಲ ನೆಗೆತದೊಂದಿಗೆ ಆ ಕುದುರೆ ಅಂಧಕಾರದ ಕಂದರದ ಮೇಲೆ ಜಿಗಿದು ಹೋಗುತ್ತದೆ.

ಈ ದರ್ಶನ ಕುರಿತು ಆಶ್ಚರ್ಯಪಡುತ್ತಿದ್ದಾಗ ನನಗೊಂದು ಶಬ್ದ ಕೇಳಿಬರುತ್ತದೆ, ಅದು ಏಕೈಕ ಶಬ್ದವಾಗಿದ್ದು ಭರವಸೆ ಮತ್ತು ವಚನ ನೀಡುವಿಕೆ–ಗಳಿಂದ ಅರ್ಥಗರ್ಭಿತವಾಗಿದೆ, ಆ ಶಬ್ದ "ಪುನಸ್ಸ್ವಾಧೀನ" (Restitution).

ಆಗ ಒಮ್ಮೆಗೆ ಕತ್ತಲೆ ಕವಿದ ಕಂದರದಲ್ಲಿ ಭಂಗವೊಂದು ಉಂಟಾಗುತ್ತದೆ ಮತ್ತು ಶ್ರೇಷ್ಠ ಮಾರ್ಗವೊಂದು ರೂಪುಗೊಳ್ಳುತ್ತದೆ, ಅದು ಥಳಥಳಿಸುವ ಕಾಮನಬಿಲ್ಲಿನ ಹಾಗಿದೆ. ಬಿಳಿ ಬಣ್ಣದ ಕಡುಗೆಂಪು ಕಾಲುಗಳಿರುವ ಪಾರಿವಾಳವೊಂದು ಈ ಮಾರ್ಗದ ಮೇಲೆ ಆರೋಹಣ ಮಾಡುತ್ತಿದೆ ಮತ್ತು ನಾನು ಅದನ್ನು, ಅದರ ಮಾರ್ಗದ ಮೇಲಿರುವುದನ್ನು ಗಮನಿಸುತ್ತಿದ್ದಾಗ ಆ ಕತ್ತಲೆಯಾಚೆಗೆ ಅದ್ಭುತ ದೃಶ್ಯವಿರುವುದನ್ನು ನೋಡುತ್ತೇನೆ.

ದೋಷರಹಿತ ಶ್ರೇಣಿವ್ಯವಸ್ಥೆಯ ಕ್ರಮದಲ್ಲಿ, ಪ್ರಕಾಶದ ಹೊದಿಕೆಯನ್ನು ಹೊತ್ತುಕೊಂಡ, ಎರಡೂ ಬದಿಯಲ್ಲಿ ಅಲುಗು ಇರುವ ಖಡ್ಗಗಳನ್ನು ಹಿಡಿದುಕೊಂಡು ಶಸ್ತ್ರ ಸಜ್ಜಿತರಾದ ಸೈನಿಕರಿರುವ ಭವ್ಯ ಸೈನ್ಯವನ್ನು ಸಮರಕ್ಕಾಗಿ ಸಜ್ಜುಗೊಳಿಸಲಾಗಿದೆ. ಅವರು ಕೇಂದ್ರದಲ್ಲಿರುವ ತಮ್ಮ ನೇತಾರನಿಂದ ಸಂಜ್ಞೆ ಬರುವುದಕ್ಕಾಗಿ ನಿರೀಕ್ಷಿಸುತ್ತಿದ್ದಾರೆ. ಆ ನೇತಾರ ವೈವಿಧ್ಯಮಯ ಪ್ರಕಾಶದಿಂದ ತೇಜಃಪುಂಜನಾಗಿದ್ದಾನೆ.

ಆದರೆ ಒಮ್ಮೆಗೆ ನನ್ನ ನೆಟ್ಟ ನೋಟ ಎತ್ತರ ಮತ್ತು ಗಾಂಭೀರ್ಯಗಳಲ್ಲಿ ಅಲ್ಲಿದ್ದವರೆಲ್ಲರನ್ನೂ ಮೀರಿಸಿದ ತರುಣನತ್ತ ಎಳೆತಕ್ಕೊಳಗಾಯಿತು. ವಿಶಾಲವಾದ ಕೆನ್ನೇರಿಳೆ ಬಣ್ಣದ ನಿಲುವಂಗಿ, ಥಳಥಳಿಸುವ ಬಿಳುಪಿನೊಂದಿಗೆ, ಅವನ ತೋಳುಗಳ ಮೇಲಿಂದ ಕೆಳಗಿಳಿದಿತ್ತು.



ಎಲ್ಲರೂ ಮೌನದಲ್ಲಿ ಲೀನರಾಗಿ ನಿಂತಿದ್ದಾರೆ, ಏಕೆಂದರೆ ಅವನು ಮಾತನಾಡಲಿದ್ದಾನೆ. ಅವನು ಮಾತನಾಡುತ್ತಾನೆ, ಅವನ ಧ್ವನಿ ಗಾಂಭೀರ್ಯ ಹಾಗೂ ಮಾಧುರ್ಯಗಳಿಂದ ಕೂಡಿ ಮೇಲೆದ್ದು ಬರುತ್ತಿದೆ. ಅವನು ಹೇಳಿದ್ದನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ: "ಸಮಯ ಸನ್ನಿಹಿತವಾಗುತ್ತಿದೆ, ಪೃಥ್ವಿಯ ಮೇಲಿನ ಸೈನ್ಯ ಹಾಗೂ ಸ್ವರ್ಗದಲ್ಲಿಯ ಸೈನ್ಯ ತಮ್ಮನ್ನು ಸಿದ್ಧಪಡಿಸಿಕೊಳ್ಳಲಿ. ಕಾರ್ಯ ಕೈಕೊಳ್ಳುತ್ತಲಿರುವವರು, ತಾಳಿಕೊಳ್ಳುವವರು ಧೈರ್ಯವನ್ನಾಗಲಿ, ತಾಳ್ಮೆಯನ್ನಾಗಲಿ ಕಳೆದುಕೊಳ್ಳದಿರಲಿ. ಸ್ವಲ್ಪ ಜನರನ್ನು ಹೊರತು ಪಡಿಸಿ ಉಳಿದವರಿಗೆ ಗೋಚರವಾಗದೆ ಇದ್ದರೂ ಕಾರ್ಯ ತೀವ್ರಗತಿಯಿಂದ ಮುಂದುವರಿದಿದೆ. ಒಂದು ಬದಿಯಲ್ಲಿ ಗೊಂದಲ ಮತ್ತು ಅಸ್ತವ್ಯಸ್ತತೆಗಳು ಇನ್ನೂ ಪ್ರಬಲವಾಗಿದ್ದರೂ, ಬೆಳೆಯುತ್ತಿರುವ ಕ್ರಮಬದ್ಧತೆ ಹಾಗೂ ಸಾಮರಸ್ಯಗಳು ಸಾಂದ್ರ ಗೋಲಗಳತ್ತ ಮುಂದೆಳೆದುಕೊಂಡು ಹೋಗುತ್ತಿವೆ. ಇನ್ನೊಂದೆಡೆಗೆ ಪೃಥ್ವಿಯ ಮೇಲೆ ಉತ್ಸಾಹಪೂರ್ಣ ಹಾಗೂ ಜ್ಞಾನೋದಯ ಪಡೆದ ಸದಿಚ್ಛೆಯುಳ್ಳ ಜನರ ಕ್ಷೇತ್ರವೊಂದರ ಮಧ್ಯದಲ್ಲಿ ಬಿತ್ತಿರುವ ಬೀಜ ಮೇಲೆದ್ದು ಬರಲು ತಯಾರಾಗಿದೆ. ಉತ್ಕ್ರಾಂತಿ ಹೊಂದುತ್ತಿರುವ ಶೂರ ಸೈನ್ಯ ತಯಾರಿ ಮಾಡಿಕೊಳ್ಳುತ್ತಿದೆ, ಅದರಿಂದಾಗಿ ಸಮಯ ಸನ್ನಿಹಿತವಾದಾಗ ಅದರ ಪ್ರಯತ್ನ ನಮ್ಮದರೊಡನೆ ಕೂಡಿಕೊಳ್ಳುವಂತಾಗುವುದು. ಕೂಡಲೆ ಸಂತೋಷದ ಸ್ತೋತ್ರಪಾಠದ, ವಿಜಯ ಹಾಗೂ ಮಹಿಮೆ ಕುರಿತು ಪ್ರಶಂಸಾಗೀತೆಯ ಅನುರಣನವಾಗುತ್ತದೆ."

ಈ ಶಬ್ದಗಳನ್ನು ಕೇಳಿ ಹರ್ಷಗೊಂಡವಳಾಗಿ ಈ ಶುಭ ಸಮಾಚಾರವನ್ನು ತೆಗೆದುಕೊಂಡು ಪೃಥ್ವಿಯತ್ತ ಮರಳಿ ಬರುತ್ತೇನೆ ಮತ್ತು ನನ್ನ ಅವರೋಹಣದಲ್ಲಿ ನನ್ನನ್ನು ಅನುಸರಿಸಿ ಕಡುಗೆಂಪು ಕಾಲುಗಳುಳ್ಳ ಬಿಳಿ ಪಾರಿವಾಳ ಬರುತ್ತದೆ.

ಅಂಧಕಾರವಿದ್ದ ಕಂದಕವನ್ನು ದಾಟಿದ ನಂತರ ನಾನು ಹಿಂದೆ ತಿರುಗಿ ನೋಡುತ್ತೇನೆ. ಓಹ್, ನಾನು ನೋಡುತ್ತಿರುವುದೇನು? ಅಂಧಕಾರದಿಂದ ಕೂಡಿದ, ಭಾರವಾದ ಮೋಡಕ್ಕೆ ಭವ್ಯವಾದ ಶಿಲುಬೆ (cross) ಆಧಾರ ಒದಗಿಸಿದೆ. ಮತ್ತು ಆ ಮೋಡ ಹಾಗೂ ಶಿಲುಬೆಗಳನ್ನು ಒಬ್ಬ ದೈತ್ಯಾಕಾರದ ಸತ್ತೆ ಹೊತ್ತುಕೊಂಡಿದ್ದಾನೆ. ಮನುಕುಲದ ಮೇಲೆ ಬಾಗಿಕೊಂಡಿರುವ ಅದ್ಭುತ ಹಾಗೂ ಜೀವಂತ ರಕ್ಷಣೆಯ ರೂಪದಲ್ಲಿರುವ ಅವನ ಮೇಲೆ ಅಧರ್ಮ ಮತ್ತು ಅಸ್ತವ್ಯಸ್ತತೆಗಳ ಭಾರ ತೂಗುತ್ತಿದೆ. ಅವನ ಉದ್ದ ಕೂದಲು ಅವನ ಸುಂದರ ಮುಖದ ಎರಡೂ

ಬದಿಗಳಲ್ಲಿ ಇಳಿಬಿದ್ದಿವೆ. ಆ ಮುಖ ಅನಂತಪಟ್ಟು ಕೋಮಲತೆಯಿಂದ ಮತ್ತು ವೇದನೆಯಿಂದ ಪೃಥ್ವಿಯತ್ತ ಹೊರಳಿದೆ.

ಓಹ್, ಹೌದು! ಆ ವಿಶಿಷ್ಟ ಗಳಿಗೆ ತೀವ್ರಗತಿಯಿಂದ ಬರುವುದಕ್ಕಾಗಿ ಎಲ್ಲರೂ ಉತ್ಸಾಹದಿಂದ, ಚೈತನ್ಯದಿಂದ ಕಾರ್ಯ ಮಾಡಬೇಕು. ಆಗ ಪೃಥ್ವಿಯ ಮೇಲಿನ ಹತಭಾಗ್ಯ ಜನರು ಚೂರು ಚೂರಾಗಿ ಹೋಗುವುದನ್ನು ತಡೆಯಲು ಅವನು ಕೈಕೊಳ್ಳುತ್ತಿರುವ ಪ್ರಯತ್ನದ ಆವಶ್ಯಕತೆ ಇಲ್ಲದಂತಾಗುವುದು, ಇನ್ನೂ ಎಚ್ಚತ್ತುಕೊಂಡಿರದ ಆ ಹತಭಾಗ್ಯ ಜನರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಅಸಮರ್ಥರಾಗಿದ್ದಾರೆ!

ಸದಾಶಯವಿದ್ದ ಜನರೆಲ್ಲ ಒಟ್ಟುಗೂಡಲಿ, ಎಲ್ಲ ಪ್ರಯತ್ನಗಳು ಏಕತ್ರವಾಗಲಿ, ಜೀವಿಸುತ್ತಿರುವ ಎಲ್ಲ ಸತ್ತೆಗಳು ಬುದ್ಧಿಮತ್ತೆಗೆ ಎಚ್ಚತ್ತುಕೊಳ್ಳುವಂತಾಗಲಿ, ಯಾರಲ್ಲಿ ಪ್ರಕಾಶ ಬೆಳಗುತ್ತಿದೆಯೋ ಅಂತಹರು ಆಧ್ಯಾತ್ಮಿಕತೆಗೆ ಮತ್ತು ಪ್ರೇಮಕ್ಕೆ ಎಚ್ಚತ್ತುಕೊಳ್ಳುವಂತಾಗಲಿ, ಆ ಪ್ರೇಮ ಸಾಮರಸ್ಯದ್ದು ಮತ್ತು ವ್ಯವಸ್ಥಿತ ಕ್ರಮದ್ದು, ಪರಮೋಚ್ಚ ಅವೈಯಕ್ತಿಕತೆಯದು ಆಗಿರಲಿ, ಅದರಿಂದಾಗಿ ಬೇಗನೆ ಸಂತೋಷದ ಸ್ತೋತ್ರಪಾತ, ವಿಜಯ ಹಾಗೂ ಮಹಿಮೆ ಕುರಿತು ಪ್ರಶಂಸಾಗೀತೆ ಇವುಗಳ ಅನುರಣನವಾಗಲಿ!!

*

## ದರ್ಶನ – 8

ನಾನು ನಿದ್ರಿಸಿದ್ದೆ ಮತ್ತು ಈಗ ಎಚ್ಚತ್ತುಕೊಂಡಿದ್ದೇನೆ.

ವಿಶಾಲವಾದ ಚೌಕಾಕಾರದ ಕೋಣೆಯಲ್ಲಿ ನನಗೆ ಎಚ್ಚರವಾಯಿತು. ಅಲ್ಲಿ ಗೋಡೆಯಿಂದ ಹೊರಗೆ ಚಾಚಿಕೊಂಡ ಕಿಟಕಿಯಿತ್ತು, ಅದು ನೈರುತ್ಯ ದಿಕ್ಕಿನತ್ತ ಮುಖ ಮಾಡಿತ್ತು. ಅದರ ಗೋಡೆಗಳಲ್ಲಿ ಓಕ ಗಿಡದ ಕಟ್ಟಿಗೆಯ ಅಂಕಣ ಫಲಕಗಳನ್ನು (panels) ಇರಿಸಲಾಗಿತ್ತು. ಪಶ್ಚಿಮ ದಿಕ್ಕಿನಲ್ಲಿರುವ ಅಂಕಣ ಫಲಕದ ಮಧ್ಯದಲ್ಲಿ ಮೌಲಿಕವಾದ ಬೆಂಕಿಗೂಡು (fireplace) ಇದೆ, ಅದನ್ನು ಶಿಲೆಯಲ್ಲಿ ಕೆತ್ತಿ ಮಾಡಲಾಗಿದೆ. ಆ ಮನೆ ಗುಡ್ಡದ ಬದಿಯಲ್ಲಿದ್ದಿರಬೇಕು, ಏಕೆಂದರೆ ಕಿಟಕಿಯ ಮೂಲಕ ವಿಶಾಲವಾದ ಸಮಪಾತಳಿಯ ಪ್ರದೇಶದ ಸುತ್ತ ದೃಷ್ಟಿ ಹರಿಸಬಹುದು, ಕ್ಷಿತಿಜದಡಿಯಲ್ಲಿ ನೇರಳೆ ಬಣ್ಣದ ಮಂಜಿನಿಂದ ಮುಸುಕಿದ ಪರ್ವತಗಳ ಶ್ರೇಣಿಯೇ ಇದೆ. ಎತ್ತರವಾದ ಗಿಡಗಳ ಮಧ್ಯೆ ಇರುವ ಕಣಿವೆಯ ತಳದಲ್ಲಿ ನದಿಯೊಂದು



ಹರಿಯುತ್ತಿದೆ, ಅಸ್ತವಾಗುತ್ತಿರುವ ಸೂರ್ಯನ ಕಿರಣಗಳು ಅದಕ್ಕೆ ಹೊಳಪು ನೀಡುತ್ತಿವೆ.

ಸಾಯಂಕಾಲದ ಈ ಇಳಿಹೊತ್ತಿನಲ್ಲಿ ಕೋಣೆ, ದೊಡ್ಡ ಕಿಟಕಿಯನ್ನು ಹೊಂದಿದಾಗ್ಯೂ ಮಬ್ಬಾಗಿದೆ, ಆದರೆ ನಾನು ಆ ಕಿಟಕಿಯ ಹತ್ತಿರ ಕುಳಿತು ಸಾದಾ ಬಿಳಿ ಬಣ್ಣದ ವಸ್ತ್ರವನ್ನು ಧರಿಸಿದ ಬಾಲಕಿಯೊಬ್ಬಳನ್ನು ನೋಡಬಲ್ಲೆ. ಅವಳ ಕೈಗಳು ತೊಡೆಯ ಮೇಲೆ ಮಡಿಚಿಕೊಂಡಿವೆ. ಅವಳು ಲಕ್ಷ್ಯಗೊಟ್ಟು ಗಮನಿಸದೆ ಪೂರ್ವ ದಿಕ್ಕಿನಲ್ಲಿರುವ ಅತ್ಯಂತ ಕತ್ತಲು ಆವರಿಸಿದ ಕೋಣೆಯ ಮೂಲೆಯನ್ನು ಲಕ್ಷ್ಯಗೊಟ್ಟು ಗಮನಿಸದ ದೃಷ್ಟಿಯಿಂದ ನೋಡುತ್ತಿದ್ದಾಳೆ. ಅವಳು ಯಾರೋ ಒಬ್ಬರು ಬರಲಿರುವುದನ್ನು ಕಾದುಕೊಂಡು ಕುಳಿತಿರುವಂತಿದೆ.

ಆ ಕೋಣೆಯಲ್ಲಿ ಇನ್ನೊಬ್ಬನಿದ್ದಾನೆ, ಅವನು ವಯಸ್ಸಾದವನಾಗಿದ್ದು ಬೆಂಕಿಗೂಡಿನ ಬಳಿ ನಿಂತಿದ್ದಾನೆ, ಅವನು ಧರಿಸಿದ ವಸ್ತ್ರ ಕಪ್ಪು ಬಣ್ಣದ್ದಾಗಿದ್ದು ಒರಟು ವಸ್ತುವನ್ನು ಹೊಂದಿದೆ.

ನಾನು ಆ ಬಾಲಕಿಯನ್ನು ಅವಲೋಕಿಸುತ್ತೇನೆ. ಅವಳ ಯೋಚನೆಗಳು, ನಾನು ಅವುಗಳನ್ನು ಕನ್ನಡಿಯಲ್ಲಿ ನೋಡಿದ ಹಾಗೆ ಸ್ಪಷ್ಟವಾಗಿವೆ. ಅವಳ ಭಾವನೆಗಳ ಬಗ್ಗೆ, ಅವು ನನ್ನವೇ ಏನೋ ಎನ್ನುವ ಹಾಗೆ, ಅರಿವುಳ್ಳವಳಾಗಿದ್ದೇನೆ. ಅವಳು ಯಾರೋ ಒಬ್ಬರಿಗಾಗಿ ಕಾದುಕೊಂಡಿದ್ದಾಳೆ. ಆದಾಗ್ಯೂ ಅವರು ಯಾರು ಎಂಬುದು ಅವಳಿಗೆ ತಿಳಿದಿಲ್ಲ. ಅವಳ ಸಲುವಾಗಿಯೇ ಅವನು ಬರಲಿರುವನೆಂಬ ಭಾವನೆ ಅವಳಲ್ಲಿದೆ.

ಬಾಗಿಲು ತೆಗೆದ ಇಲ್ಲವೆ ಮುಚ್ಚಿದ ಸದ್ದು ಮಾಡದೆ ಅವನು ಒಮ್ಮೆಗೆ ಕೋಣೆಯಲ್ಲಿ ಪ್ರವೇಶಿಸಿದ್ದಾನೆ. ಆ ಬಾಲಕಿ ಕುಳಿತಿರುವ ಸ್ಥಳದ ಎದುರಿಗಿರುವ ಕೋಣೆಯ ತುದಿಯಿಂದ ಅವನು ಕೋಣೆಯಲ್ಲಿ ಪ್ರವೇಶಿಸಿದ್ದಾನೆ. ಅವಳೊಬ್ಬಳ ಹೊರತಾಗಿ ಉಳಿದವರ ಕಣ್ಣಿಗೆ ಒಂದು ಬಗೆಯ ಅತಿಸೂಕ್ಷ್ಮತೆಯಿಂದ ಮರೆಮಾಡಿಕೊಂಡಿದ್ದಾನೆ. ಬಹಳ ಕಪ್ಪಾದ ನೇರಳೆ ಬಣ್ಣದ ಹೊದಿಕೆ ಹೊತ್ತುಕೊಂಡಿದ್ದಾನೆ. ಅದು ಅವನು ಸಾಮಾನ್ಯ ಮನುಷ್ಯ ಎಂದು ತೋರಿಬರುವಂತೆ ಮಾಡುತ್ತದೆ. ಆದರೆ ಉಜ್ವಲ ಬಿಳಿ ಬಣ್ಣದ ತೇಜಸ್ಸು ಅವನ ದೇಹದಿಂದ ಹೊರಹೊಮ್ಮುತ್ತಿರುವುದನ್ನು ಮತ್ತು ಅವನ ಸುತ್ತಲೆಲ್ಲ ಅದು ಹೊಳೆಯುತ್ತಿರುವುದನ್ನು ಅವಳು ಒಮ್ಮೆಗೆ ನೋಡಿದ್ದಾಳೆ.

ಅಭಿವ್ಯಕ್ತಪಡಿಸಲಾಗದ ದೈವೀ ಪ್ರೇಮದ ಉಕ್ಕುವಿಕೆಯಿಂದಾಗಿ ಅವಳು ತನ್ನೆಲ್ಲ ಸತ್ತೆಯೊಂದಿಗೆ ಅವನನ್ನು ಗುರುತಿಸಿದ್ದಾಳೆ. ಆದರೆ ಭಾವೋನ್ಮತ್ತತೆ ಎಷ್ಟೊಂದು ಸಾಮರ್ಥ್ಯಪೂರ್ಣವಾಗಿತ್ತೆಂದರೆ ಅವಳು ತನ್ನ ಆಸನ ಬಿಟ್ಟು ಕದಲದಂತಾದಳು.

ಆ ಬಾಲಕಿಯ ತಂದೆಯಾದ ವಯಸ್ಸಾದ ಮನುಷ್ಯ ಹೊಸದಾಗಿ ಬಂದವನನ್ನು ಗೌರವಪೂರ್ವಕವಾಗಿ ಸಮೀಪಿಸುತ್ತಾನೆ ಮತ್ತು ಮರ್ಯಾದೆ ನೀಡುವ ಶಬ್ದಗಳೊಂದಿಗೆ ಸ್ವಾಗತಿಸುತ್ತಾನೆ. ಆ ಪ್ರಕಾಶ ತುಂಬಿಕೊಂಡ ಸತ್ತೆ ಅವನನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಸ್ಪಂದಿಸುತ್ತಾನೆ. ಒಬ್ಬರನ್ನೊಬ್ಬರು ಅಗಲಿದ ನಂತರ, ತನ್ನ ಸ್ಥಳವನ್ನು ಬಿಟ್ಟು ಮಬ್ಬಾದ ಉಡುಪಿನಲ್ಲಿ ತೆರಳಿದ ವಯಸ್ಸಾದ ಮನುಷ್ಯ ಆ ಸ್ಥಳಕ್ಕೆ ಶೋಭಾಯಮಾನವಾದ ಬಂಗಾರ ವರ್ಣದ ಉಡುಪಿನೊಂದಿಗೆ ಮರಳಿ ಬರುತ್ತಾನೆ. ಆಶ್ಚರ್ಯಚಕಿತಳಾದ ಬಾಲಕಿ "ನೋಡು ಅವನು ಎಂತಹ ಪವಾಡಗಳನ್ನು ಮಾಡಬಲ್ಲ" ಎಂದು ಹೇಳುತ್ತಾಳೆ.

ಆಗ ಅವನು ಅವಳ ಬಳಿ ಬರುತ್ತಾನೆ, ಮತ್ತು ಅವನು ಬರುತ್ತಿದ್ದಂತೆ ಅವನ ಸುತ್ತಲಿರುವ ಪ್ರಕಾಶ ಹೆಚ್ಚು ಬಿಳಿ ಬಣ್ಣದ್ದಾಗುತ್ತದೆ, ಹೊಳಪಿನದಾಗುತ್ತದೆ, ಅವನೇ ಸ್ವತಃ ಪ್ರಕಾಶಮಯನಾಗುತ್ತಾನೆ. ಅವನು ಎಷ್ಟೊಂದು ಅತಿಶಯಿಸುವಷ್ಟು ಸುಂದರನಾದನೆಂದರೆ ಅವಳು ಆಶ್ಚರ್ಯಚಕಿತಳಾಗಿ, ಆನಂದತುಂದಿಲಳಾಗಿ ನೆಲಕ್ಕಿಳಿದು ಬಿಟ್ಟು ಮೂರ್ಛೆ ಹೋಗುತ್ತಾಳೆ, ಆ ಮೂರ್ಛೆ ಅಲ್ಪಕಾಲದ್ದಾಗಿರುತ್ತದೆ, ಅವಳು ಬೇಗನೆ ಚೇತರಿಸಿಕೊಳ್ಳುತ್ತಾಳೆ. ಅವನ ಹತ್ತಿರಕ್ಕೆ ಬಂದು ಬಾಗಿ ಅವನ ಬರಿದಾಗಿರುವ ಕಾಲುಗಳಿಗೆ ಮುದ್ದುಕೊಡುತ್ತಾಳೆ. ಸಂಪೂರ್ಣ ಕೋಮಲತೆಯಿಂದ ಕೂಡಿದ ಸೂಚನೆಯೊಂದಿಗೆ ಅವನು ಅವಳನ್ನು ಮೇಲಕ್ಕೆತ್ತಿ ಹಿಡಿದು ತನ್ನ ತೋಳುಗಳಲ್ಲಿ ಬಂಧಿಸುತ್ತಾನೆ. ಅವಳು ತನ್ನ ಶಿರವನ್ನು ಪ್ರೀತಿಪೂರ್ವಕವಾಗಿ ಅವನ ಹೆಗಲ ಮೇಲೆ ಇರಿಸುತ್ತಾಳೆ. ಹೀಗೆ ಅಪ್ಪುಗೆಗೆ ಒಳಗಾದ ಅವರು ಬಹಳ ಸಮಯದ ವರೆಗೆ ನಿಂತುಕೊಂಡಿರುತ್ತಾರೆ. ಮಸುಕಾಗುತ್ತಿರುವ ಸೂರ್ಯನ ಕಿರಣಗಳ ಬೆಳಕಿನಲ್ಲಿ ವಿಶಾಲವಾದ ಸಮತಲದ ನೆಲದತ್ತ ನೆಟ್ಟ ದೃಷ್ಟಿಯಿಂದ ನೋಡುತ್ತಾರೆ.

ನಿಶ್ಚಲ ನೀರವತೆಯಲ್ಲಿ ಅವರು ತಮ್ಮ ಆತ್ಮಗಳ ಆಳಗಳನ್ನು, ಯೋಚನೆಗಳನ್ನು ವಿನಿಮಯ ಮಾಡಿಕೊಂಡರು, ಕೈಕೊಳ್ಳಬೇಕಾದ ಕಾರ್ಯದ ಹಿರಿಮೆಯನ್ನು ಕುರಿತು, ಬರಲಿರುವ ವಿಜಯದ ಭವ್ಯತೆಯನ್ನು ಕುರಿತು ಮೌನದಲ್ಲಿ



ಮಾತನಾಡಿದರು, ಇದೆಲ್ಲವನ್ನು ಕುರಿತು ಅವನ ಸುತ್ತಲಿರುವ ಥಳಥಳಿಸುವ ತೇಜಸ್ಸು ವೈಭವೋಪೇತ ಚಿಹ್ನೆಯ ರೂಪದಲ್ಲಿ ತೋರಿಬಂದಿತು.*

ಅವರಲ್ಲಿದ್ದುದೆಲ್ಲವೂ ಸಂಸರ್ಗದಲ್ಲಿತ್ತು, ಗಾಢವಾದ ಸಂತೋಷದಲ್ಲಿ ಸಮತೋಲನದಲ್ಲಿತ್ತು. ಕಿಟಕಿಯ ಬಳಿ, ಹೀಗೆ ರೂಪುಗೊಂಡ ಜೊತೆ ನಿಂತುಕೊಂಡಿದ್ದು, ಸಾಮರಸ್ಯದ ಹಿರಿಮೆಯಲ್ಲಿ, ಸುಂದರವಾಗಿತ್ತು, ಅವನು ಎತ್ತರವಾಗಿದ್ದ, ತೆಳ್ಳಗಾಗಿದ್ದ, ಅವನ ತಲೆಗೂದಲು ಹಾಗೂ ಗಡ್ಡ ಕಪ್ಪು ಬಣ್ಣದವಾಗಿದ್ದವು, ಗುಡ್ಡದಡಿಯಲ್ಲಿದ್ದ ವಿಶಾಲವಾದ ಬಯಲು ಪ್ರದೇಶ ಎದುರಿಗಿರುವುದನ್ನು ಗಾಂಭೀರ್ಯದಿಂದ ಹಾಗೂ ವಿಷಣ್ಣತೆಯಿಂದ ಕೂಡಿದ ದೃಷ್ಟಿಯಿಂದ, ಆದರೆ ಅನಂತಪಟ್ಟು ಮಾಧುರ್ಯ ಹಾಗೂ ಕೋಮಲತೆಗಳಿಂದ ನೋಡುತ್ತಿದ್ದ, ತರುಣಿಯೂ, ಸುಂದರ ಕೂದಲಿನವಳೂ ಆದ ಅವಳು ಅವನ ತೋಳಿನ ಎದುರಿಗೆ ಪ್ರೀತಿಯಿಂದ ಬೆಚ್ಚಗಿರುವಂತೆ ಒಳದೂರಿಸಿಕೊಂಡಿದ್ದಾಳೆ, ಅವಳು ಕಣ್ಣುಗಳು ಅವನತ್ತ ನೋಡುತ್ತ ಆಳವಾದ ಪ್ರೀತಿಯನ್ನು ಹೊರಸೂಸುತ್ತಿವೆ. ದೀರ್ಘ ಹಾಗೂ ಮೌನದಲ್ಲಿ ಕೈಕೊಂಡ ಧ್ಯಾನದ ನಂತರ ಅವನು ಅವಳತ್ತ ತಿರುಗುತ್ತಾನೆ ಮತ್ತು ಅವಳ ಹುಬ್ಬುಗಳ ಮೇಲೆ ತುಟಿಗಳನ್ನು ಒತ್ತುತ್ತಾನೆ.

* ಹಲವಾರು ವರ್ಷಗಳ ನಂತರ ಇದು ಭೌತಿಕ ಸ್ತರದಲ್ಲಿ ಮಾರ್ಚ 29, 1914ರಲ್ಲಿ ಸಂಭವಿಸಿತು. ಶ್ರೀಮಾತೆಯವರು ಶ್ರೀ ಅರವಿಂದರನ್ನು ಪಾಂಡಿಚೇರಿಯಲ್ಲಿ ಭೇಟಿ ಮಾಡಿದರು. ನಿಶ್ಚಲ ನೀರವತೆಯಲ್ಲಿ ಅವರು ತಮ್ಮ ಆತ್ಮದ ಆಳಗಳನ್ನು, ಯೋಚನೆಗಳನ್ನು ವಿನಿಮಯ ಮಾಡಿಕೊಂಡರು, ಕೈಕೊಳ್ಳಬೇಕಾದ ಕಾರ್ಯದ ಹಿರಿಮೆಯನ್ನು ಕುರಿತು, ಬರಲಿರುವ ವಿಜಯದ ಭವ್ಯತೆಯನ್ನು ಕುರಿತು ಮೌನದಲ್ಲಿ ಮಾತನಾಡಿದರು ...

ಶ್ರೀಮಾತೆಯವರು ಕೂಡ ಈ ಭೇಟಿ ಕುರಿತು 1930–31ರ ಸಮಯದಲ್ಲಿ ಮಾತನಾಡಿದ್ದರು: "ನನ್ನ ಅನುಭವವನ್ನು ಕುರಿತು ಹೇಳುವೆ. ನಾನು ಶ್ರೀ ಅರವಿಂದರನ್ನು ಮೊದಲ ಸಲ ಪಾಂಡಿಚೇರಿಯಲ್ಲಿ ಭೇಟಿ ಮಾಡಿದಾಗ ಆಳವಾದ ಏಕಾಗ್ರತೆಯಲ್ಲಿದ್ದೆ, ಆ ಸ್ಥಿತಿಯಲ್ಲಿ ಅತಿಮನಸ್ಸಿನಲ್ಲಿರುವ ವಿಷಯಗಳನ್ನು ನೋಡುತ್ತಿದ್ದೆ, ಅಸ್ತಿತ್ವದಲ್ಲಿದ್ದಿರಬೇಕಾದ ವಿಷಯಗಳು ಯಾವುದೋ ಕಾರಣದಿಂದಾಗಿ ಪ್ರಕಟವಾಗುತ್ತಿರಲಿಲ್ಲ. ನಾನು ನೋಡಿದ್ದನ್ನು ಕುರಿತು ಶ್ರೀ ಅರವಿಂದರಿಗೆ ಹೇಳಿದೆ ಮತ್ತು ಅವು ಪ್ರಕಟವಾಗಲಿವೆಯೆ ಎಂದು ಕೇಳಿದೆ. ಅವರು ಸರಳವಾಗಿ "ಹೌದು" ಎಂದು ಹೇಳಿದರು ಮತ್ತು ಕೂಡಲೆ ನಾನು ಅತಿಮಾನಸ ಪೃಥ್ವಿಯನ್ನು ಸ್ಪರ್ಶಿಸಿದ್ದನ್ನು ನೋಡಿದೆ, ಅದು ಸಿದ್ಧಿಸಿಕೊಳ್ಳುವುದನ್ನು ಪ್ರಾರಂಭಿಸಿತ್ತು."

(ಸಂ. AIM)

ಅವಳೂ ಕೂಡ ಕ್ರಮೇಣ ಪ್ರಕಾಶಮಾನಳಾಗುತ್ತಿರುವುದನ್ನು ನಾನು ಗಮನಿಸುತ್ತೇನೆ. ಅವಳು ಅದನ್ನು ಗಮನಿಸಿ ಅದನ್ನು ಅವನಿಗೆ ಸೌಮ್ಯ, ತಗ್ಗುದನಿಯಲ್ಲಿ ಹೇಳುತ್ತಾಳೆ. ಅವನು ಉತ್ತರ ನೀಡುತ್ತಾನೆ: "ನಮ್ಮನ್ನು ಒಂದುಗೂಡಿಸುವ ಶ್ರೇಷ್ಠ ಒಲವಿನ ಪರಿಣಾಮ ಅದಾಗಿದೆ, ಮತ್ತು ಅದೂ ಕೂಡ ನಿನ್ನ ಆಧ್ಯಾತ್ಮಿಕತೆಯಿಂದ ಸಾಧ್ಯವಾಗಿದೆ. 'ಸತ್ತೆಯ ಉಭಯತ್ವದ (duality) ಸಮತೋಲನದಲ್ಲಿ ಜಯವಿದೆ' ಎಂದು ಹೇಳಲಾಗಿದೆಯಲ್ಲವೆ? ನಾವೀಗ ಆ ಸಮತೋಲನವನ್ನು ಸಿದ್ಧಿಸಿಕೊಂಡಿರುವುದರಿಂದ ನಮ್ಮೆದುರಿಗಿರುವ ಸಾಮರಸ್ಯದ ಶ್ರೇಷ್ಠ ಕಾರ್ಯವನ್ನು ಸಿದ್ಧಿಸಿಕೊಳ್ಳುವುದರ ಬಗ್ಗೆ ನಿಸ್ಸಂಶಯರಾಗಿರಬಹುದು."

ವಯಸ್ಸಾದ ಮನುಷ್ಯ ಕೋಣೆಯಿಂದ ಹೊರಗೆ ಹೋಗಿ ಸುಮಾರು ಸಮಯವಾಗಿತ್ತು. ಈಗ ಅವನು ಮರಳಿ ಬಂದು ಊಟ ಸಿದ್ಧವಿದೆ, ಬಂದು ಊಟ ಮಾಡಿರೆಂದು ಆಮಂತ್ರಣ ನೀಡುತ್ತಾನೆ.

ಆದರೆ ಆ ತರುಣಿ "ನನಗೆ ಹಸಿವಿಲ್ಲ, ನಾನು ನಿದ್ರೆ ಮಾಡಲು ಬಯಸುತ್ತೇನೆ, ನಿದ್ರೆಯಲ್ಲಿ ಜೀರ್ಣಿಸಿಕೊಳ್ಳುವುದಿದೆ" ಎಂದು ಹೇಳುತ್ತಾಳೆ.

ಅದಕ್ಕೆ ಅಧಿಕವಾಗಿ ಅವನು: "ನಮಗೆ ಆಹಾರದ ಆವಶ್ಯಕತೆ ಇಲ್ಲ, ನಮ್ಮದು ಆಂತರಿಕ ಪೋಷಣೆ" ಎಂದು ಹೇಳುತ್ತಾನೆ ಮತ್ತು ಅವಳತ್ತ ಹೊರಳಿ "ಬಾ, ವಿಶ್ರಾಂತಿ ತೆಗೆದುಕೋ" ಎಂದು ಕರೆಯುತ್ತಾನೆ.

ಜೊತೆಗೂಡಿ, ಕೈಯಲ್ಲಿ ಕೈಯಿರಿಸಿ ಕೋಣೆಯ ಹಿಂಬದಿಯಲ್ಲಿರುವ ಮಂಚದ ಮೇಲೆ ಒರಗಿಕೊಂಡು ನಿದ್ರೆ ಮಾಡುತ್ತಾರೆ.

ಅವರಿಂದ ಹೊರಸೂಸುವ ಬಿಳಿ ಬಣ್ಣದ ಪ್ರಕಾಶ ಹೆಚ್ಚು ಹೆಚ್ಚಾಗಿ ಗಾಢವಾಗುತ್ತ ಬೆಳೆಯುತ್ತದೆ, ವಿಶಾಲವಾಗಿ ಹರಡಿಕೊಳ್ಳುತ್ತದೆ. ಆ ಮನೆಯ ಹೊರಗೆ ಹೊಳೆಯುತ್ತದೆ, ವಿಶಾಲವಾದ ಬಯಲು ಪ್ರದೇಶದಾಚೆಗೂ ಹರಡುತ್ತದೆ.

ಸಮತೋಲನದ ತೇಜಸ್ಸು ಹೊಳೆಯುತ್ತಿರುವಲ್ಲೆಲ್ಲ ಅದು ಆರೋಗ್ಯ, ಭರವಸೆ, ಸಾಮರಸ್ಯ ಹಾಗೂ ಸಂತೋಷ ಇವೆಲ್ಲವುಗಳನ್ನು ತರುತ್ತದೆ.

**– ಶ್ರೀಮಾತೆ**

(ಶ್ರೀ ಅರವಿಂದಾಶ್ರಮ 'Bulletin of Sri Aurobindo International Centre of Education' ಹೆಸರಿನ ತ್ರೈಮಾಸಿಕ ಪತ್ರಿಕೆಯನ್ನು ಪ್ರಕಟಿಸುತ್ತದೆ. ಅದರ 1982, 1983 ಮತ್ತು 1984 ರ ಸಂಚಿಕೆಗಳಿಂದ ಆಯ್ದು ಪುನರ್ಮುದ್ರಿಸಿದ್ದು.)

*



## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ಮೇ 2014 ರಿಂದ 5ನೇ ಜೂನ್ 2014 ರವರೆಗೂ "New Birth and Birthdays" – Words of Sri Aurobindo and The Mother ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕರು ಮತ್ತು ಶ್ರೀಮಾತಾರವಿಂದರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ವೀಕ್ಷಿಸಿದರು.

ದಿನಾಂಕ 31ನೇ ಮೇ 2014 ರ ಶನಿವಾರ ಸಾಯಂಕಾಲ 5.30 ರಿಂದ 7.30 ರವರೆಗೂ ಹಾಗೂ 1ನೇ ಜೂನ್ 2014 ರ ಭಾನುವಾರ ಬೆಳಿಗ್ಗೆ 10.30 ರಿಂದ 12.00 ಗಂಟೆಯವರೆಗೆ ಪ್ರೊ॥ ಟಿ. ರಾಮಕೃಷ್ಣ, Hon. Director, Sri Aurobindo Centre for Education in Human Values, Bengaluru ಇವರಿಂದ "ಸಾವಿತ್ರಿ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಜರಿದ್ದರು.

ದಿನಾಂಕ 7ನೇ ಜೂನ್ 2014 ರ ಶನಿವಾರದಂದು ಬೆಳಿಗ್ಗೆ 10.30 ರಿಂದ 12.15 ರ ವರೆಗೆ ಶ್ರೀಯುತ ಶ್ರದ್ಧಾಳು ರಾನಡೆಯವರ ವಿರಚಿತ "India's Reunion and World Union" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಜರಿದ್ದರು.

ದಿನಾಂಕ 11ನೇ ಜೂನ್ 2014 ರ ಬುಧವಾರದಂದು ಶ್ರೀ ಅರವಿಂದರ 14ನೇ ವರ್ಷದ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನವನ್ನು ಮಾಡಲಾಯಿತು. ತತ್ಸಂಬಂಧ ಅದೇ ದಿನ ಸಾಯಂಕಾಲ 6.00 ರಿಂದ 7.30 ರವರೆಗೆ ಡಾ॥ ಅನುರಾಧಾ ಚೌದರಿ, ಶ್ರೀ ಅರವಿಂದೋ ಆಶ್ರಮ, ಪುದುಚೇರಿ ಇವರಿಂದ "Vedic Psychology in the light of Sri Aurobindo's interpretation and the Sadhana of Integral Yoga" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಗೂ ಇತರರು ಹಾಜರಿದ್ದರು.



*Let not thy virtues be such as men praise or reward, but such as make for thy perfection and God in thy nature demands of thee.*

- Sri Aurobindo

**RNI No. 22511/1971**
No. of Pages **40 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.